ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು.

*ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ*
*(ಜಿಲ್ಲಾಪಂಚಾಯತ್) ಚಿಕ್ಕಮಗಳೂರು*

# ಮಾಹಿತಿ ಹಕ್ಕು ಅಧಿನಿಯಮ
# 2005 ಪ್ರಕರಣ 4(1)(ಬಿ)ಯ
# ಅಡಿಯಲ್ಲಿ ಪ್ರಕಟಿಸಲಾದ
# ಸ್ವ ಇಚ್ಛೆ ಪ್ರಕಟಣೆಯ
# ವಿವರಗಳು
# 2009-10

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ,
(ಜಿಪಂ) ಚಿಕ್ಕಮಗಳೂರು.

## ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ,
## (ಜಿಲ್ಲಾಪಂಚಾಯಿತಿ) ಚಿಕ್ಕಮಗಳೂರು - ಚಿಕ್ಕಮಗಳೂರು ಜಿಲ್ಲೆ

ಸಂ/ತೋಉನಿ/ಜಿಪಂಚಿ/ಅಧೀ/09-10 ದಿನಾಂಕ: 16-11-09

### "ಸಾರ್ವಜನಿಕ ಮಾಹಿತಿಗೆ ಪ್ರಕಟಣೆ"
### 2009-10
### ಮಾಹಿತಿ ಹಕ್ಕು ಅಧಿನಿಯಮ, 2005 ಪ್ರಕರಣ 4(1)(ಬಿ) ಅಡಿಯಲ್ಲಿ ಮಾಹಿತಿ ಪ್ರಕಟಣೆ

### 1. ಸಾಮಾನ್ಯ ಮಾಹಿತಿ

ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲ್ಲೂಕು ನೈಸರ್ಗಿಕವಾಗಿ ಸಂಪದ್ಭರಿತ ತಾಲ್ಲೂಕಾಗಿದ್ದು ಪುಣ್ಯ ಕ್ಷೇತ್ರಗಳನ್ನು, ಪ್ರೇಕ್ಷಣೀಯ ಸ್ಥಳಗಳನ್ನು ಒಳಗೊಂಡಿರುತ್ತದೆ. ಈ ತಾಲ್ಲೂಕಿನ ಹೆಚ್ಚಿನ ವಿಸ್ತೀರ್ಣವು ಮಲೆನಾಡು ಪ್ರದೇಶಗಳನ್ನು ಒಳಗೊಂಡಿರುವುದರಿಂದ ಮಲೆನಾಡು ತಾಲ್ಲೂಕೆಂದೇ ಪ್ರಸಿದ್ದಿಯಾಗಿದೆ. ತಾಲ್ಲೂಕು ಮತ್ತು ಜಿಲ್ಲೆಯ ಕೇಂದ್ರ ಸ್ಥಾನವಾದ ಚಿಕ್ಕಮಗಳೂರು ರಾಜ್ಯದ ರಾಜಧಾನಿಯಿಂದ 251ಕಿಲೋ ಮೀಟರ್ ದೂರದಲ್ಲಿದೆ. ಚಿಕ್ಕಮಗಳೂರು ತಾಲ್ಲೂಕಿನಲ್ಲಿ 8 ಹೋಬಳಿಗಳು, 47 ಗ್ರಾಮ ಪಂಚಾಯಿತಿಗಳು ಹಾಗು 229 ಹಳ್ಳಿಗಳನ್ನು ಒಳಗೊಂಡಿರುತ್ತದೆ. 2001ರ ಜನಗಣತಿಯ ಪ್ರಕಾರ ತಾಲ್ಲೂಕು ಒಟ್ಟು 2,95,565 ಜನ ಸಂಖ್ಯೆ ಹೊಂದಿದ್ದು, ಪುರುಷರು 1,49,158,(50.46%), ಮಹಿಳೆಯರು 1,46,407(49.53%), ಗ್ರಾಮೀಣ ಜನಸಂಖ್ಯೆ 1,94,314 (65.74%), ನಗರ ಜನಸಂಖ್ಯೆ 1,01,251 (34.25%) ಗಳಷ್ಟಿರುತ್ತದೆ. ತಾಲ್ಲೂಕಿನ ಒಟ್ಟು ಭೌಗೋಳಿಕ ವಿಸ್ತೀರ್ಣವು 1614 ಚದರ ಮೀಟರ್‌ಗಳಷ್ಟಿರುತ್ತದೆ. ತಾಲ್ಲೂಕಿನ ಬೇಸಾಯಕ್ಕೆ ಯೋಗ್ಯವಾದ ಜಮೀನು 29,773 ಹೆಕ್ಟೇರ್‌ಗಳಷ್ಟಿರುತ್ತದೆ. ತಾಲ್ಲೂಕಿನಲ್ಲಿ ತೋಟಗಾರಿಕೆ ಬೆಳೆಗಳನ್ನು 13,373 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ಉತ್ಪಾದನೆ 1,38,361 ಟನ್‌ಗಳಷ್ಟಿರುತ್ತದೆ. ತಾಲ್ಲೂಕಿನಲ್ಲಿ ಒಟ್ಟು 46,588 ಸಂಖ್ಯೆ ಭೂ ಹಿಡುವಳಿದಾರರು ಇದ್ದು, ಇದರಲ್ಲಿ ಅತಿಸಣ್ಣ ಭೂ ಹಿಡುವಳಿದಾರರು (<1 ಹೆಕ್ಟೇರ್), 28,660 ಸಂಖ್ಯೆ, ಸಣ್ಣ ಭೂ ಹಿಡುವಳಿದಾರರು (1–2 ಹೆಕ್ಟೇರ್) 10,212 ಸಂಖ್ಯೆ, ಅರೆ ಮಧ್ಯಮ ಭೂ ಹಿಡುವಳಿದಾರರು (2–4 ಹೆಕ್ಟೇರ್) 4,861 ಸಂಖ್ಯೆ, ಮಧ್ಯಮ ಭೂ ಹಿಡುವಳಿದಾರರು (4–10 ಹೆಕ್ಟೇರ್) 2,131 ಸಂಖ್ಯೆ, ದೊಡ್ಡ ಭೂ ಹಿಡುವಳಿದಾರರು (>10 ಹೆಕ್ಟೇರ್) 724 ಸಂಖ್ಯೆಯಷ್ಟಿರುತ್ತಾರೆ.


KARNATAKA
Bidar
Gulbarga
Bijapur
Raichur
Bagalkot
Belgaum
Dharwad
Koppal
Gadag
Bellary
Uttara Kannada
Haveri
T - Tumkur
Davanagere
T
Shimoga
Chitradurga
Kolar
Udupi
Chikmagalur
Tumkur
Bangalore
Hassan
Dakshina Kannada
Mandya
Bangalore Rural
Kodagu
Mysore
Chamarajanagar


ಚಿಕ್ಕಮಗಳೂರು ಜಿಲ್ಲೆ
CHIKMAGALUR DISTRICT
DAVANAGERE DIST.
SHIMOGA DIST.
CHITRADURGA DIST.
TARIKERE
N. R. PURA
UDUPI DIST.
KOPPA
KADUR
SRINGERI
CHIKMAGALUR
TUMKUR DIST.
HASSAN DIST.
MUDIGERE
DAKSHINA KANNADA DIST.

ತಾಲ್ಲೂಕಿನಲ್ಲಿ ಭಾಗಶಃ ಅತೀ ಹೆಚ್ಚು ಮಳೆ ಹಾಗೂ ಭಾಗಶಃ ಕಡಿಮೆ ಮಳೆಯಾಗುವ ಪ್ರದೇಶಗಳಿದ್ದು, ತಾಲ್ಲೂಕಿನಲ್ಲಿ ವಾರ್ಷಿಕವಾಗಿ ಸರಾಸರಿ ಮಳೆಯ ಪ್ರಮಾಣ ಮಿಲಿ ಮೀಟರ್ ಇರುತ್ತದೆ.

ತಾಲ್ಲೂಕಿನ ವಾತಾವರಣವು ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹದಾಯಕವಾಗಿರುತ್ತದೆ. ವಾತಾವರಣ ತೇವಾಂಶವು ಸೆಪ್ಟೆಂಬರ್ ತಿಂಗಳಲ್ಲಿ ಹೆಚ್ಚಾಗಿದ್ದು ಫೆಬ್ರವರಿ ತಿಂಗಳಲ್ಲಿ ಕಡಿಮೆ ಇರುತ್ತದೆ.

ತಾಲ್ಲೂಕಿನಲ್ಲಿಕಾಫಿ ಉದ್ಯಮ ಅತ್ಯಂತ ಪ್ರಮುಖ ವಾಣಿಜ್ಯ ಉದ್ಯಮವಾಗಿದ್ದು ಈ ತಾಲ್ಲೂಕಿನಲ್ಲಿ ಅತಿ ಹೆಚ್ಚು ಪ್ರದೇಶದಲ್ಲಿ ಕಾಫಿಯನ್ನು ಬೆಳೆಯಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಕೃಷಿ ಆಧಾರಿತ ಉದ್ಯಮಗಳಾದ ಹಣ್ಣು ಮತ್ತು ತರಕಾರಿ ಸಂಸ್ಕರಣೆ, ವೆನಿಲ್ಲಾ ಸಂಸ್ಕರಣೆ, ಆಂಥೂರಿಯಂ ಬೇಸಾಯ, ಅಡಿಕೆ ಸಂಸ್ಕರಣೆ ಮುಂತಾದ ಉದ್ಯಮಗಳು ಹೆಚ್ಚಿನ ಮಹತ್ವ ಪಡೆದಿದೆ.

## ತಾಲ್ಲೂಕಿನ ವಿಶೇಷ ತೋಟಗಾರಿಕಾ ಬೆಳೆಗಳು

| ಬೆಳೆ | ತಳಿ |
|---|---|
| ಈರುಳ್ಳಿ | ಬಳ್ಳಾರಿ ರೆಡ್, ಲೋಕಲ್ |
| ಆಲೂಗಡ್ಡೆ | ಕುಫ್ರಿ ಜ್ಯೋತಿ, ಎ.ಟಿ.ಎಲ್–1, 2 |
| ಮಾವು | ಮಲ್ಲಿಕಾ, ಆಲಫಾನ್ಸೋ, ನೀಲಮ್ |
| ಸಪೋಟ | ಕಾಲಿಪತ್ತಿ, ಕ್ರಿಕೆಟ್ ಬಾಲ್ |
| ಬಾಳೆ | ಏಲಕ್ಕಿ ಬಾಳೆ, ಡ್ವಾರ್ಫ್ ಕ್ಯಾವೆಂಡಿಶ್, ರೊಬಸ್ಟಾ, ನೇಸ್‌ಡ್ರನ್, ಜಿ–9 |
| ತೆಂಗು | ತಿಪಟೂರ್ ಟಾಲ್, ಅರಸೀಕರೆ ಟಾಲ್ |
| ಅಡಿಕೆ | ತೀರ್ಥಹಳ್ಳಿ ಲೋಕಲ್ |
| ಕಾಳುಮೆಣಸು | ಪಣಿಯೂರ್–1,2, ಕರಿಮುಂಡಾ |
| ಏಲಕ್ಕಿ | ಮೂಡಿಗೆರೆ–1, ನೆಲ್ಯಾಣಿ ಗೋಲ್ಡ್ |
| ಶುಂಠಿ | ರಿಯೊ ಡಿ ಜನೈರೊ, ಲೋಕಲ್ |
| ವೀಳ್ಯದೆಲೆ | ಮೈಸೂರ್ |
| ವೆನಿಲ್ಲಾ | ಲೋಕಲ್ |
| ಆಂಥೂರಿಯಂ | ಟ್ರಾಪಿಕಲ್ ರೆಡ್, ಡಚ್ ತಳಿಗಳು |
| ಚೆಂಡುಹೂವು | ಆಫ್ರಿಕನ್ ಹಳದಿ, ಜೈಂಟ್ ಡಬಲ್, ಲೋಕಲ್ |
| ಸೇವಂತಿಗೆ | ಎಲ್ಲೋ ಗೋಲ್ಡ್, ಇಂದಿರಾ ರವಿಕಿರಣ್. ಲೋಕಲ್, ರೆಡ್ ಗೋಲ್ಡ್ |

## ತಾಲ್ಲೂಕಿನಲ್ಲಿರುವ ತೋಟಗಾರಿಕಾ ಬೆಳೆಗಳ ವಿವರ:

2009-10 ನೇ ಸಾಲಿನಲ್ಲಿ ತಾಲ್ಲೂಕಿನಲ್ಲಿ 14,168ಹೆಕ್ಟೇರ್ ತೋಟಗಾರಿಕಾ ಪ್ರದೇಶ ಇರುತ್ತದೆ. ತಾಲ್ಲೂಕಿನ ನಿವ್ವಳ ಬಿತ್ತನೆ ಪ್ರದೇಶ 63,562ಹೆ. ಇದ್ದು ಶೇ.21.03 ರಷ್ಟು ಪ್ರದೇಶವನ್ನು ತೋಟಗಾರಿಕಾ ಬೆಳೆ ಆಕ್ರಮಿಸಿಕೊಂಡಿರುತ್ತದೆ. ವಿವಿಧ ತೋಟಗಾರಿಕಾ ಬೆಳೆಗಳ ಅಡಿ ಇರುವ ಪ್ರದೇಶಗಳ ವಿವರ ಈ ಕೆಳಗಿನಂತಿರುತ್ತದೆ.

| ಕ್ರಸಂ | ಬೆಳೆಗಳು | ವಿಸ್ತೀರ್ಣ (ಹೆ.) |
|---|---|---|
| 1 | **ಹಣ್ಣಿನ ಬೆಳೆಗಳು** | 3352 |
| 2 | **ತರಕಾರಿ ಬೆಳೆಗಳು** | 4797 |

| | | |
|---|---|---|
| 3 | ಸಾಂಬಾರು ಬೆಳೆಗಳು | 3069 |
| 4 | ತೋಟದ ಬೆಳೆಗಳು | 2652 |
| 5 | ವಾಣಿಜ್ಯ ಪುಷ್ಪಗಳು | 298 |
| | ಒಟ್ಟು | **14,168** |

**ತಾಲ್ಲೂಕಿನ ತೋಟಗಾರಿಕೆ ಬೆಳೆಗಳ ಮಾಹಿತಿ**

| ಕ್ರ.ಸಂ | ತಾಲೂಕು | ವಿಸ್ತೀರ್ಣ (ಹೆ.) | ಉತ್ಪಾದನೆ (ಟನ್) | ಇಳುವರಿ (ಟನ್/ಹೆ.) | ಮೌಲ್ಯ (ರೂ.ಲಕ್ಷ) |
|---|---|---|---|---|---|
| 1. | ಚಿಕ್ಕಮಗಳೂರು | 14,168 | 1,38,361 | 10.35 | 15,524.84 |

**ಚಿಕ್ಕಮಗಳೂರು ತಾಲ್ಲೂಕಿನಲ್ಲಿರುವ ತೋಟಗಾರಿಕೆ ಬೆಳೆಗಳ ವಿವರಗಳು:**

**1 ಚಿಕ್ಕಮಗಳೂರು : ತೆಂಗು, ಅಡಿಕೆ, ಬಾಳೆ, ಆಲೂಗಡ್ಡೆ, ತರಕಾರಿಗಳು, ಕಾಫಿ, ಕಾಳು ಮೆಣಸು, ಹೂವುಗಳು**

**ಮತ್ತು ಸಾಂಬಾರು ಬೆಳೆಗಳು**

## 4. ಚಿಕ್ಕಮಗಳೂರು ತಾಲ್ಲೂಕಿನ ತೋಟಗಾರಿಕಾ ಕ್ಷೇತ್ರದ ಮಾಹಿತಿ:

ತಾಲ್ಲೂಕಿನಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ **1** ತೋಟಗಾರಿಕೆ ಕ್ಷೇತ್ರವಸಿರುತ್ತದೆ (ಜಿಲ್ಲಾ ವಲಯ)

| ಕ್ರ. ಸಂ | ತೋಟಗಾರಿಕೆ ಕ್ಷೇತ್ರ/ ಸಸ್ಯಾಗಾರಗಳ ಹೆಸರುಮತ್ತು ವಿಳಾಸ | ಒಟ್ಟು ವಿಸ್ತೀರ್ಣ (ಹೆ.) | ಅಭಿವೃದ್ಧಿ ಪಡಿಸಿದ ವಿಸ್ತೀರ್ಣ (ಹೆ.) | ಅಭಿವೃದ್ಧಿ ಪಡಿಸ ಬೇಕಾಗಿ ರುವ ವಿಸ್ತೀರ್ಣ (ಹೆ) | ಮೂಲಭೂತ ಸೌಕರ್ಯ | ಸಸ್ಯಸಂಪತ್ತಿನ ವಿವರ |
|---|---|---|---|---|---|---|
| 1. | ದಂಟರಮಕ್ಕಿ ತೋಟಗಾರಿಕೆ ಕ್ಷೇತ್ರ ಚಿಕ್ಕಮಗಳೂರು | 4.70 | 4.70 | - | ತರೆದಭಾವಿ-2, ಕೊಳವೆಭಾವಿ-1, ನೀರಿನ ತೊಟ್ಟಿ-2, ಪಂಪ್ ಹೌಸ್-1, ಉಗ್ರಾಣ-1, ಗ್ರೀನ್ ಹೌಸ್-2, ಪಾಲಿಹೌಸ್-3, ಕಲ್ಲುಕಂಬ ಮತ್ತು ತಂತಿ-304, 4 ಸುತ್ತು, ಎರೆಹುಳು ಉತ್ಪಾದನಾ ಘಟಕ-2 | ಸಪೋಟ-175, ಮಾವು-38, ತೆಂಗು-27,ಹಲಸು-8, ಮಲೇಶಿಯನ್ ಆಪಲ್-2 ಪನ್ನೇರಳೆ-2, ಕಮರಕ್-2, **ಶೀಘ್ರ ಅಭಿವೃದ್ಧಿ ತಾಕು**<br>ಮಾವು(1ನೇತಾಕು)143<br>ಮಾವು(2ನೇತಾಕು)120<br>ಮಾವು(3ನೇತಾಕು)20<br>ಮಾವು(4ನೇತಾಕು)100<br>ಸಪೋಟ 200<br>ನೆಲ್ಲಿ 300<br>ನೇರಳೆ 200 |

**5. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಜಿಲ್ಲಾ ಪಂಚಾಯಿತಿ ಚಿಕ್ಕಮಗಳೂರು, ತಾಲ್ಲೂಕು ಕಛೇರಿಯ ಕಾರ್ಯಸಂಘಟನೆಯ ಪಟ್ಟಿ.**

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು

↓

ಸಹಾಯಕ ತೋಟಗಾರಿಕೆ ನಿರ್ದೇಶಕರು

↓

ಸಹಾಯಕ ತೋಟಗಾರಿಕಾ ಅಧಿಕಾರಿ (ತಾಂ.ಸಹಾಯಕರು) | ಪ್ರಥಮ ದರ್ಜೆ ಸಹಾಯಕರು

↓

ಸಹಾಯಕ ತೋಟಗಾರಿಕಾ ಅಧಿಕಾರಿ (೮ ಸಂ)
(೮ ಹೋಬಳಿ ರೈತ ಸಂಪರ್ಕ ಕೇಂದ್ರ)

↓

ತೋಟಗಾರಿಕೆ ಸಹಾಯಕರು (೩ ಸಂ)

↓

ತೋಟಗಾರ

**ಚಿಕ್ಕಮಗಳೂರು ತಾಲ್ಲೂಕಿನ ತೋಟಗಾರಿಕೆಯಲ್ಲಿನ ಖಾಲಿ ಹುದ್ದೆಗಳ ವಿವರ**

| ಕ್ರ.ಸಂ | ಪದನಾಮ | ವೇತನ ಶ್ರೇಣಿ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿ ಇರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| 1 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | 14050–25050 | 1 | 0 | 1 |
| 2 | ಸಹಾಯಕ ತೋಟಗಾರಿಕೆ ನಿರ್ದೇಶಕರು | 11400–22650 | 1 | 1 | 0 |
| 3 | ಸಹಾಯಕ ತೋಟಗಾರಿಕೆ ಅಧಿಕಾರಿಗಳು | 10800–20025 | 9 | 3 | 6 |
| 4 | ಪ್ರಥಮ ದರ್ಜೆ ಸಹಾಯಕರು | 7275–13350 | 1 | 1 | 0 |
| 5 | ತೋಟಗಾರಿಕೆ ಸಹಾಯಕರು | 6250–12000 | 3 | 2 | 1 |
| 6 | ತೋಟಗಾರ | 5500–9500 | 1 | 1 | 0 |
| | ಒಟ್ಟು | | 16 | 8 | 8 |

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಕಛೇರಿಯು ಮೇಲು ಉಸ್ತುವಾರಿ ನಡೆಸುತ್ತಾರೆ. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಯಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಮುಖ್ಯಸ್ಥರಾಗಿದ್ದು, ಒಬ್ಬ ಸಹಾಯಕ ತೋಟಗಾರಿಕೆ ನಿರ್ದೇಶಕರು, ಒಟ್ಟು

9 ಸಹಾಯಕ ತೋಟಗಾರಿಕೆ ಅಧಿಕಾರಿಗಳು, ಒಬ್ಬರು ಪ್ರಥಮ ದರ್ಜೆ ಸಹಾಯಕರು, 3 ಜನ ತೋಟಗಾರಿಕೆ ಸಹಾಯಕರು, ಹಾಗೂ ಓರ್ವ ತೋಟಗಾರ ಹುದ್ದೆ ಇರುತ್ತದೆ.

ಹಾಲಿ ಈ ಕಛೇರಿಯಲ್ಲಿ ಒಬ್ಬ ಸಹಾಯಕ ತೋಟಗಾರಿಕೆ ನಿರ್ದೇಶಕರು, ಇಬ್ಬರು ಸಹಾಯಕ ತೋಟಗಾರಿಕೆ ಅಧಿಕಾರಿಗಳು, ಒಬ್ಬರು ಪ್ರಥಮ ದರ್ಜೆ ಸಹಾಯಕರು, ಇಬ್ಬರು ತೋಟಗಾರಿಕೆ ಸಹಾಯಕರು, ಹಾಗೂ ಓರ್ವ ತೋಟಗಾರ, ಅಧಿಕಾರಿ/ಸಿಬ್ಬಂಧಿ ವರ್ಗ ಕಾರ್ಯನಿರ್ವಹಿಸುತ್ತಿರುತ್ತಾರೆ.

## 7. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಯ ಕಾರ್ಯಗಳು ಮತ್ತು ಕರ್ತವ್ಯಗಳು ಈ ಕೆಳಕಂಡಂತೆ ಇರುತ್ತವೆ.

**ಸಾಮಾನ್ಯ ಕಾರ್ಯಗಳು:**

1. ತಾಲ್ಲೂಕು ತೋಟಗಾರಿಕೆ ಇಲಾಖೆಯ ತಾಲ್ಲೂಕಿನ ಕಛೇರಿಯಾಗಿದ್ದು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಆಡಳಿತ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುವುದು.

2. ಕಾಲ ಕಾಲಕ್ಕೆ ಅಧೀನ ಅಧಿಕಾರಿಗಳಿಗೆ ಇಲಾಖಾ ಚಟುವಟಿಕೆಗಳ ಬಗ್ಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡುವುದು

3. ತಾಲ್ಲೂಕಿನ ತೋಟಗಾರಿಕೆ ಬೆಳೆಗಾರರ ಅವಶ್ಯಕತೆಗಳಿಗೆ ತಕ್ಕಂತೆ ಯೋಜನೆಗಳನ್ನು ರೂಪಿಸುವುದು.

4. ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳನ್ನು ಹೋಬಳಿವಾರು ಹಂಚಿಕೆ ಮಾಡಿ ಸಮರ್ಪಕವಾಗಿ ಅನುಷ್ಠಾನಗೊಳಿಸುವುದು.

5. ಅಧೀನ ಕಛೇರಿಗಳು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಅವಶ್ಯಕವಿರುವ ಮಾರ್ಗದರ್ಶನ ನೀಡುವುದು.

6. ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಸರ್ವತೋಮುಖ ಅಭಿವೃದ್ಧಿ ಪಡಿಸಲು ಅವಶ್ಯವಿರುವ ಮಾರ್ಗದರ್ಶನ ನೀಡುವುದು.

7. ಯೋಜನೆ /ಯೋಜನೇತರ ಬಿಲ್ಲುಗಳನ್ನು ತಯಾರಿಸಿ ತೋಟಗಾರಿಕೆ ಉಪನಿರ್ದೇಶಕರಿಗೆ ಮೇಲುಸಹಿಗಾಗಿ ಮಂಡಿಸುವುದು.

8. ತಾಲ್ಲೂಕು ತೋಟಗಾರಿಕಾ ಫಲಾನುಭವಿಗಳ ತಾಕು ಪರಿಶೀಲನೆ ಮತ್ತು ರೈತ ಸಂಪರ್ಕ ಕೇಂದ್ರ ಕಛೇರಿಗೆ ಪರಿಶೀಲನೆ ನಡೆಸುವುದು.

9. ತಾಲ್ಲೂಕು ಮಟ್ಟದಲ್ಲಿ ವಿವಿಧ ಯೋಜನೆಗಳ ಅನುಷ್ಠಾನ ಮತ್ತು ಪ್ರಗತಿಯ ಪರಿಶೀಲನೆ ಮಾಡಿ ಕ್ರೋಡಿಕೃತ ಪ್ರಗತಿ ವರದಿಯನ್ನು ತಯಾರಿಸಿ ಜಿಲ್ಲಾ ಮಟ್ಟಕ್ಕೆ ಸಲ್ಲಿಸುವುದು.

10. ವಿಶೇಷ ಯೋಜನೆಗಳ ಅನುಷ್ಠಾನಕ್ಕೆ ಅವಶ್ಯವಿರುವ ತಾಲ್ಲೂಕು ಮಟ್ಟದ ಸಮಿತಿಗಳ ಸದಸ್ಯ ಕಾರ್ಯದರ್ಶಿ/ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವುದು.

11. ತಾಲ್ಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆಗಳಿಗೆ ಇಲಾಖೆಯ ಪ್ರತಿನಿಧಿಯಾಗಿ ಭಾಗವಹಿಸುವುದು.

12. ಪ್ರಕೃತಿ ವಿಕೋಪ ಸಂಭವಿಸಿದ ಸಮಯದಲ್ಲಿ ಆಗಿರುವ ಹಾನಿಯ ಅಂದಾಜನ್ನು ಪರಿಶೀಲಿಸಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ಸಹಾಯಧನಕ್ಕೆ ಕಂದಾಯ ಇಲಾಖೆಗೆ ಶಿಪಾರಸ್ಸು ಮಾಡುವುದು.

**ವಿಸ್ತರಣೆ ಮತ್ತು ತರಬೇತಿ:**

1. ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಕುರಿತು ರೈತರಿಗೆ ಹಾಗೂ ಸಾರ್ವಜನಿಕರಿಗೆ ಮಾಹಿತಿ ನೀಡುವುದು.
2. ತೋಟಗಾರಿಕೆ ಬೆಳೆಗಳ ಬೇಸಾಯ, ನಿರ್ವಹಣೆ, ಕೊಯ್ಲು, ಸಂಸ್ಕರಣೆ ಕುರಿತು ರೈತರಿಗೆ ತರಬೇತಿ ನೀಡುವುದು.
3. ತೋಟಗಾರಿಕೆಯಲ್ಲಿ ಸಾವಯವ ಕೃಷಿ, ಜೇನು ಕೃಷಿ ಮುಂತಾದ ಅವಶ್ಯಕ ಹೊಸ ತಂತ್ರಜ್ಞಾನಗಳನ್ನು ರೈತರಿಗೆ ತರಬೇತಿ, ವಿಚಾರ ಸಂಕೀರ್ಣ, ಕಾರ್ಯಾಗಾರ ಮತ್ತು ಜಾಗೃತಿ ಶಿಬಿರ ಮುಂತಾದವುಗಳನ್ನು ಏರ್ಪಡಿಸುವ ಮೂಲಕ ಮಾಹಿತಿ ಒದಗಿಸುವುದು.
4. ತೋಟಗಾರಿಕೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಹೊಸ ಹೊಸ ಯೋಜನೆಗಳ ಮಾಹಿತಿಯನ್ನು ಪತ್ರಿಕೆ, ಆಕಾಶವಾಣಿ, ದೂರದರ್ಶನ ಮುಂತಾದ ಸಮೂಹ ಮಾಧ್ಯಮಗಳ ಮೂಲಕ ರೈತರಿಗೆ ತಲುಪುವಂತೆ ಮಾಡುವುದು.
5. ಕೃಷಿ ವಿಜ್ಞಾನ ಕೇಂದ್ರ, ಕೃಷಿ ಸಂಶೋಧನಾ ಕೇಂದ್ರ, ಕೃಷಿ ವಿಶ್ವವಿದ್ಯಾಲಯ, ತೋಟಗಾರಿಕೆ ಮಹಾವಿದ್ಯಾಲಯ ಮುಂತಾದ ಕೃಷಿ ಆಧಾರಿತ ಸಂಶೋಧನಾ ಕೇಂದ್ರಗಳಿಂದ ವಿವಿಧ ಹೊಸ ತಂತ್ರಜ್ಞಾನಗಳನ್ನು ರೈತರ ತೋಟಗಳಿಗೆ ತಲುಪಿಸುವಂತೆ ಕ್ರಮ ಕೈಗೊಳ್ಳುವುದು.
6. ರೈತರ ಮಕ್ಕಳಿಗೆ, ರೈತರಿಗೆ, ರೈತ ಮಹಿಳೆಯರಿಗೆ ತರಬೇತಿ ನೀಡಲು ತಾಲ್ಲೂಕು ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುವುದು
7. ರೈತರನ್ನು ರಾಜ್ಯ ಮತ್ತು ಹೊರ ರಾಜ್ಯಗಳ ಉತ್ತಮ ಪ್ರಗತಿಪರ ರೈತರ ತೋಟ, ಸಂಶೋದನಾ ಕೇಂದ್ರಗಳಿಗೆ ಪ್ರವಾಸ ಕೈಗೊಂಡು ರೈತರ ಜ್ಞಾನ ವರ್ಧನೆಗೆ ಸಹಕರಿಸುವುದು.

8. **ಸಸ್ಯಾಭಿವೃದ್ಧಿ:**
   1. ಉತ್ತಮ ಗುಣಮಟ್ಟದ ಜಿಲ್ಲೆಯ ವಾತಾವರಣಕ್ಕೆ ಹೊಂದುವ ತಳಿಗಳನ್ನು ಗುರುತಿಸಿ ಅಭಿವೃದ್ಧಿಗೊಳಿಸುವುದು.
   2. ಇಲಾಖೆಯ ತೋಟಗಾರಿಕೆ ಕ್ಷೇತ್ರಗಳಿಂದ, ಸಾರ್ವಜನಿಕ ವಲಯದ ನರ್ಸರಿಗಳಿಂದ, ಖಾಸಗಿ ವಲಯದ ನರ್ಸರಿಗಳಿಂದ ಉತ್ತಮ ಗುಣಮಟ್ಟದ ಕಸಿ/ಸಸಿಗಳನ್ನು ಉತ್ಪಾದಿಸಲು ಕ್ರಮ ಕೈಗೊಳ್ಳುವುದು.
   3. ಉತ್ತಮ ಗುಣಮಟ್ಟದ ಕಸಿ/ಸಸಿಗಳು ಅವಶ್ಯಕ ಪ್ರಮಾಣದಲ್ಲಿ ಸಾರ್ವಜನಿಕ ವಲಯದಲ್ಲಿ ಲಭ್ಯವಿಲ್ಲದಿದ್ದ ಸಮಯದಲ್ಲಿ ಖಾಸಗಿ ವಲಯದ ನರ್ಸರಿಗಳಿಂದ ಕರ್ನಾಟಕ ಪಾರದರ್ಶಕ ನಿಯಮಾವಳಿಗಳ ಮೂಲಕ ಪಡೆದು ರೈತರಿಗೆ ಒದಗಿಸುವ ವ್ಯವಸ್ಥೆ ಮಾಡುವುದು.
   4. ತಾಲ್ಲೂಕಿನ ವಿಶೇಷ ತೋಟಗಾರಿಕೆ ಬೆಳೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಕ್ರಮ ಕೈಗೊಳ್ಳುವುದು.
   5. ತಾಲ್ಲೂಕಿನ ಆಯಾ ಪ್ರದೇಶಗಳ ಬೇಡಿಕೆಗೆ ಅನುಗುಣವಾಗಿ ವಿವಿಧ ಯೋಜನೆಗಳಡಿಯಲ್ಲಿ ವಿವಿಧ ಬೆಳೆಗಳ ಸಸ್ಯಾಭಿವೃದ್ಧಿ ಕಾರ್ಯಕ್ರಮಕ್ಕೆ ಗುರಿಗಳನ್ನು ನಿಗದಿಪಡಿಸುವುದು ಮತ್ತು ಅನುಷ್ಠಾನಗೊಳಿಸುವುದು.

**ಪ್ರದೇಶ ವಿಸ್ತರಣೆ**

1. ಜಿಲ್ಲೆಯ ವಾತಾವರಣಕ್ಕೆ ಸೂಕ್ತವಾದ ತಳಿಗಳನ್ನು ಆಯ್ಕೆ ಮಾಡಿ ಅವುಗಳ ಪ್ರದೇಶ ವಿಸ್ತರಣೆ ಕೈಗೊಳ್ಳುವುದು.

2. ಆಯಾ ಪ್ರದೇಶಗಳಿಗೆ ಸೂಕ್ತವಾದ ಬೆಳೆಗಳನ್ನು ಮತ್ತು ತಳಿಗಳನ್ನು ಆಯ್ಕೆ ಮಾಡಿ ಯೋಗ್ಯ ಫಲಾನುಭವಿಗಳಿಂದ ಪ್ರದೇಶ ವಿಸ್ತರಣೆ ಕೈಗೊಳ್ಳುವುದು.
3. ಹಣ್ಣು, ತರಕಾರಿ, ಹೂವಿನ ಬೆಳೆಗಳು, ತೋಟದ ಬೆಳೆಗಳು, ಸಂಬಾರು ಬೆಳೆಗಳು, ಔಷಧಿ ಬೆಳೆಗಳು, ಸುಗಂಧದ್ರವ್ಯ ಬೆಳೆಗಳ ಪ್ರದೇಶ ವಿಸ್ತರಣೆಗೆ ಯೋಗ್ಯವಾದ ಪರಿಸರವನ್ನು ಆಯ್ಕೆ ಮಾಡಿ ಅಲ್ಲಿನ ರೈತರಿಗೆ ಸದರಿ ಬೆಳೆಗಳ ಪ್ರದೇಶ ವಿಸ್ತರಣೆಗೆ ಪ್ರೋತ್ಸಾಹಿಸುವುದು.
4. ತೋಟಗಾರಿಕಾ ಬೆಳೆಗಳ ಹೊಸ ತಳಿಗಳನ್ನು ಪರಿಚಯಿಸುವುದು.
5. ವಿನಾಶದ ಅಂಚಿನಲ್ಲಿರುವ ತೋಟಗಾರಿಕೆ ಬೆಳೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಪಡಿಸುವುದು.

**ನೀರಿನ ಮೂಲಗಳ ನಿರ್ಮಾಣ**

1. ತೋಟಗಾರಿಕೆ ಬೆಳೆಗಳಿಗೆ ಅವಶ್ಯಕತೆಯಿರುವ ಪ್ರಮಾಣದಲ್ಲಿ ನೀರಾವರಿ ಸೌಲಭ್ಯ ಒದಗಿಸಲು ಬೇಕಾದ ಸಮುದಾಯ ಕೆರೆಗಳನ್ನು ಮತ್ತು ಕೃಷಿ ಹೊಂಡಗಳನ್ನು ನಿರ್ಮಿಸಲು ರೈತರನ್ನು ಪ್ರೋತ್ಸಾಹಿಸುವುದು.
2. ವೈಜ್ಞಾನಿಕ ಪದ್ಧತಿಯಲ್ಲಿ ಬೆಳೆಗಳಿಗೆ ಸಾಕಾಗುವ ಪ್ರಮಾಣದ ನೀರನ್ನು ಸಂಗ್ರಹಿಸಿಟ್ಟುಕೊಳ್ಳಲು ಅವಶ್ಯಕತೆಗೆ ತಕ್ಕಂತೆ ಸಮುದಾಯ ಕೆರೆಗಳನ್ನು ಮತ್ತು ಕೃಷಿ ಹೊಂಡಗಳನ್ನು ನಿರ್ಮಿಸಲು ಸಹಾಯಧನ ಒದಗಿಸುವುದು.

**ರಕ್ಷಿತ ಬೇಸಾಯ**

1. ತೋಟಗಾರಿಕೆ ಬೆಳೆಗಳಿಗೆ ಅವಶ್ಯಕವಿರುವ ಹಸಿರುಮನೆ ಮತ್ತು ಪಾಲಿ ಮನೆಗಳ ನಿರ್ಮಾಣಕ್ಕೆ ರೈತರನ್ನು ಪ್ರೋತ್ಸಾಹಿಸುವುದು.
2. ಶೇಡ್ ನೆಟ್ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು.
3. ಹೊಸ ಹೊಸ ಬೆಳೆಗಳನ್ನು ಸಂರಕ್ಷಿತ ಬೇಸಾಯದಲ್ಲಿ ಬೆಳೆಯಲು ಪ್ರೋತ್ಸಾಹಿಸುವುದು.

**ಸಮಗ್ರ ಪೋಷಕಾಂಶ ಹಾಗೂ ಸಮಗ್ರ ಪೀಡೆ ನಿರ್ವಹಣೆ**

1. ತೋಟಗಾರಿಕೆ ಬೆಳೆಗಳಿಗೆ ಅವಶ್ಯವಿರುವ ಪೋಷಕಾಂಶಗಳ ನಿರ್ವಹಣೆ ಮಾಡಲು ಬೇಕಾದ ಜೈವಿಕ ಗೊಬ್ಬರಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಒದಗಿಸುವ ವ್ಯವಸ್ಥೆ ಮಾಡುವುದು.
2. ಮಣ್ಣಿನ ರಸಸಾರ ನಿರ್ವಹಣೆಗೆ ಅವಶ್ಯವಾದ ಸುಣ್ಣ / ಜಿಪ್ಸಂ ಬಳಸಲು ಪ್ರೋತ್ಸಾಹಿಸುವುದು.
3. ಹಸಿರೆಲೆ ಗೊಬ್ಬರಗಳ ಮಹತ್ವವನ್ನು ರೈತರಿಗೆ ಮನದಟ್ಟು ಮಾಡಿ ಬಳಕೆಯನ್ನು ಪ್ರೋತ್ಸಾಹಿಸುವುದು.
4. ಜೈವಿಕ ಪದ್ದತಿಯಲ್ಲಿ ರೋಗ ಮತ್ತು ಕೀಟಗಳ ನಿಯಂತ್ರಣ ಪದ್ದತಿಗೆ ಪ್ರೋತ್ಸಾಹಿಸುವುದು.
5. ಬೋರ್ಡೋ ಮಿಶ್ರಣ, ಜೈವಿಕ ಕೀಟನಾಶಕಗಳು, ಸಮ್ಮೋಹಕ ಬಲೆಗಳ ಬಳಕೆಗೆ ಸಹಾಯಧನ ಒದಗಿಸುವುದು

**ಸಾವಯವ ಕೃಷಿ**

1. ಸ್ಥಳಿಯವಾಗಿ ಲಭ್ಯವಿರುವ ಕೃಷಿ ತ್ಯಾಜ್ಯ ವಸ್ತುಗಳನ್ನು ಬಳಸಿಕೊಂಡು ಅತಿ ಕಡಿಮೆ ಖರ್ಚಿನಲ್ಲಿ ಎರೆಹುಳು ಗೊಬ್ಬರ, ಬಯೋಡೈಜೆಸ್ಟರ್‌ಗಳನ್ನು ನಿರ್ಮಿಸಲು ಪ್ರೋತ್ಸಾಹಿಸುವುದು.
2. ಸಾವಯವ ಪರಿವರ್ತನೆಗೆ ರೈತರನ್ನು ಪ್ರೋತ್ಸಾಹಿಸುವುದು.
3. ಸಾವಯವ ಕೃಷಿ ದೃಡೀಕರಣ ವ್ಯವಸ್ಥೆ ಹೊಂದಲು ಪ್ರೋತ್ಸಾಹಿಸುವುದು.
4. ಸಾವಯವ ಕೃಷಿ ಅಳವಡಿಕೆ ಕುರಿತು ಸರ್ವಿಸ್ ಪ್ರೊವೈಡರ್‌ಗಳು, ಸಾವಯವ ಕೃಷಿಕರಿಗೆ, ಇಲಾಖಾ ವಿಸ್ತರಣಾಧಿಕಾರಿಗಳಿಗೆ ತರಬೇತಿ ನೀಡುವ ವ್ಯವಸ್ಥೆ ಮಾಡುವುದು.

5. ಇಲಾಖೆಯ ತೋಟಗಾರಿಕೆ ಕ್ಷೇತ್ರಗಳಲ್ಲಿ ಮಾದರಿ ಸಾವಯವ ತೋಟ ನಿರ್ಮಾಣ ಮಾಡಿಸುವುದು.

**<u>ಜೇನು ಕೃಷಿ</u>**

1. ರೈತರ ತೋಟಗಳಲ್ಲಿ ಜೇನು ಸಾಕಣೆಗೆ ಪ್ರೋತ್ಸಾಹಿಸುವುದು.
2. ಜೇನು ಸಾಕಣಿಕೆ ಸೊಸೈಟಿಗಳ ಮೂಲಕ ರೈತರಿಗೆ ತರಬೇತಿ ಏರ್ಪಡಿಸುವುದು.
3. ರೈತರ ತೋಟಗಳ ಬೆಳೆಗಳಲ್ಲಿನ ಪರಾಗಸ್ಪರ್ಶ ಹೆಚ್ಚಳದಲ್ಲಿ ಜೇನು ಹುಳಗಳ ಪಾತ್ರದ ಬಗ್ಗೆ ರೈತರಿಗೆ ಅರಿವು ಮೂಡಿಸುವುದು.

**<u>ಕೊಯ್ಲೋತ್ತರ ನಿರ್ವಹಣೆ</u>**

1. ತೋಟಗಾರಿಕೆ ಬೆಳೆಗಳಾದ ಹಣ್ಣು, ತರಕಾರಿ, ತೋಟದ ಬೆಳೆಗಳು, ಔಷಧಿ ಸಸ್ಯಗಳು ಮತ್ತು ಸುಗಂಧ ದ್ರವ್ಯ ಬೆಳೆಗಳ ಕೊಯ್ಲೋತ್ತರ ನಿರ್ವಹಣೆಗೆ ಪ್ರೋತ್ಸಾಹಿಸುವುದು.
2. ತೋಟಗಾರಿಕೆ ಬೆಳೆಗಳ ಅವಶ್ಯಕತೆಗೆ ತಕ್ಕಂತೆ ಪ್ಯಾಕ್ ಹೌಸ್‌ಗಳ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು.
3. ಶೀತಲ ಗೃಹ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು.
4. ತೋಟಗಾರಿಕೆ ಬೆಳೆಗಳ ಪ್ರಾಥಮಿಕ ಸಂಸ್ಕರಣಾ ಘಟಕ ನಿರ್ಮಾಣಕ್ಕೆ ಪ್ರೋತ್ಸಾಹ ನೀಡುವುದು.

**<u>ತೋಟಗಾರಿಕೆ ಬೆಳೆಗಳಿಗೆ ಮಾರುಕಟ್ಟೆ ಅಭಿವೃದ್ಧಿ</u>**

1. ಮಾರುಕಟ್ಟೆಯಲ್ಲಿ ನಿರತರಾದ ಸಂಸ್ಥೆಗಳಾದ ಹಾಪ್‌ಕಾಮ್ಸ್, ತಾಲ್ಲೂಕು ತೋಟಗಾರಿಕೆ ಬೆಳೆಗಾರರ ಸಂಘಗಳು, ಎಪಿಎಂಸಿ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಸಗಟು ಮಾರುಕಟ್ಟೆ ಅಭಿವೃದ್ಧಿಗೆ ಸಹಾಯಧನ ಒದಗಿಸುವುದು.
2. ಗ್ರಾಮೀಣ ಮಾರುಕಟ್ಟೆ, ರೈತ ಸಂತೆ, ನೇರ ಮಾರುಕಟ್ಟೆ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು.
3. ತೋಟಗಾರಿಕೆ ಬೆಳೆಗಳ ಬೆಂಬಲ ಬೆಲೆ ಯೋಜನೆಯಡಿ ಖರೀದಿಯ ಸಮಯದಲ್ಲಿ ತಾಂತ್ರಿಕ ದೃಡೀಕರಣಕ್ಕೆ ಮೇಲಧಿಕಾರಿಗಳ ಸಲಹೆಯಂತೆ ಕ್ರಮ ಕೈಗೊಳ್ಳುವುದು

**<u>ಇತರೆ ಕಾರ್ಯಗಳು:</u>**

1. ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮಾನ್ಯ ತೋಟಗಾರಿಕೆ ಉಪ ನಿರ್ದೇಶಕರು, ಮತ್ತಿತರ ಮೇಲಾಧಿಕಾರಿಗಳು ಸೂಚಿಸುವ ವಿಶೇಷ ಕೆಲಸಗಳನ್ನು ನಿರ್ವಹಿಸುವುದು.
2. ಜನಸ್ಪಂದನಾ ಸಭೆ ಮುಂತಾದ ಸಭೆಗಳಿಗೆ ಹಾಜರಾಗಿ ಸಾರ್ವಜನಿಕರಿಗೆ ಮಾಹಿತಿ ನೀಡುವುದು
3. ಪ್ರಕೃತಿ ವಿಕೋಪ ಮುಂತಾದ ಸಮಯಗಳಲ್ಲಿ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಕೆಲಸ ನಿರ್ವಹಿಸುವುದು.
4. ಇನ್ನಿತರೆ ಕಾಲಕಾಲಕ್ಕೆ ಸೂಚಿಸಲಾಗುವ ವಿಶೇಷ ಕಾರ್ಯ ನಿರ್ವಹಿಸುವುದು

## 4 B (II) ಅಧಿಕಾರಿ/ ನೌಕರರುಗಳ ಅಧಿಕಾರ ಮತ್ತು ಕರ್ತವ್ಯಗಳು

| | |
|---|---|
| **ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು** | ತಾಲ್ಲೂಕಿನ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯ ವಲಯ ಮತ್ತು ಜಿಲ್ಲಾ ವಲಯ ಹಾಗೂ ಎನ್.ಎಚ್.ಎಂ. ಯೋಜನೆಗಳಿಗೆ ಸಂಬಂಧಿಸಿದಂತೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಹುದ್ದೆಗೆ ಸಂಬಂಧಿಸಿದ ಅಧಿಕಾರ ವ್ಯಾಪ್ತಿಯೊಳಗೆ ಅಭಿವೃದ್ಧಿ ಹಾಗೂ ಆಡಳಿತ ಕೆಲಸ ನಿರ್ವಹಿಸುವುದು, ಅಧಿಕಾರ ಮೀರಿದ ಪ್ರಸ್ತಾವನೆಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಸಹಾಯಕ ತೋಟಗಾರಿಕೆ ನಿರ್ದೇಶಕರು** | ಎಲ್ಲಾ ಶಾಖೆಗಳ ಸಂಬಂಧಿಸಿದಂತೆ ತಾಂತ್ರಿಕ ಸಹಾಯಕರು ಸಲ್ಲಿಸುವ ಕಡತಗಳನ್ನು ಪರಿಶೀಲಿಸಿ ಮಂಡಿಸುವುದು. ಪ್ರಮುಖ ವಿಷಯಗಳನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರವರೊಂದಿಗೆ ಚರ್ಚಿಸಿ ತಮ್ಮ ಅಧೀನ ಸಿಬ್ಬಂಧಿಗಳೊಂದಿಗೆ ಕಡತವನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಕ್ರಮವಹಿಸುವುದು, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಅನುಪಸ್ಥಿತಿಯಲ್ಲಿ ಕಛೇರಿ ದೈನಂದಿನ ಕೆಲಸಗಳ ನಿರ್ವಹಣೆ ಹಾಗೂ ಸಭೆಗಳಿಗೆ ಹಾಜರಾಗುವುದು. ಸಹಾಯಕ ತೋಟಗಾರಿಕೆ ಅಧಿಕಾರಿಗಳ ಕಡತಗಳ ತಪಾಸಣೆ ಕೈಗೊಳ್ಳುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಸಹಾಯಕ ತೋಟಗಾರಿಕೆ ಅಧಿಕಾರಿಗಳು** | ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗೆ ಸಂಬಂಧಪಟ್ಟ ಎಲ್ಲಾ ಶಾಖೆಗಳ ಕಡತಗಳನ್ನು ಪರಿಶೀಲಿಸಿ ಮಂಡಿಸುವುದು. ಪ್ರಮುಖ ವಿಷಯಗಳನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರೊಂದಿಗೆ ಚರ್ಚಿಸಿ ಅಧೀನ ಮುಖ್ಯಾಧಿಕಾರಿಗಳೊಂದಿಗೆ ಕಡತಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವುದು. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗೆ ಸಂಬಂಧಿಸಿದ ಫಲಾನುಭವಿಗಳ ತೋಟಕ್ಕೆ ಭೇಟಿ ನೀಡಿ ಪರಿಶೀಲಿಸುವುದು. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗೆ ಸಂಬಂಧಪಟ್ಟ ಪ್ರಗತಿ ವರದಿಗಳನ್ನು ತಯಾರಿಸುವುದು. ಪ್ರಗತಿ ವರದಿಯನ್ನು ರಾಷ್ಟ್ರೀಯ ತೋಟಗಾರಿಕೆ ಮಿಷನ್ ವೆಬ್‌ಸೈಟ್‌ನಲ್ಲಿ ದಾಖಲಿಸುವುದು. ಮೇಲಧಿಕಾರಿಗಳು ಕಾಲಕಾಲಕ್ಕೆ ಕೇಳಲಾಗುವ ಮಾಹಿತಿಯನ್ನು ತಯಾರಿಸಿ ಸಲ್ಲಿಸುವುದು. ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡುವುದು ರಾ.ತೋ.ಮಿ., ರಾಜ್ಯ ವಲಯ, ತಾಲ್ಲೂಕು ಪಂಚಾಯಿತಿ ಯೋಜನೆ ತಾಕುಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡುವುದು ಹಾಗೂ ಹನಿ ನೀರಾವರಿ ಕಡಗಳನ್ನು ಪರಿಸೀಲಿಸಿ ಮಂಡಿಸುವುದು ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಪ್ರ.ದ.ಸ.:** | ಹಂಚಿಕೆಯಾದ ವಿಷಯವನ್ನು ಸಮರ್ಪಕವಾಗಿ ನಿಯಮಗಳನ್ವಯ ಪರಿಶೀಲಿಸಿ ಕಡತ ರಚಿಸಿ ಕಛೇರಿ ಕೈಪಿಡಿ ನಿಯಮಗಳ ಪ್ರಕಾರ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು ನಗಧು ಹಾಗೂ ನಗದು ಪುಸ್ತಕಗಳ ನಿರ್ವಹಣೆ, ಜಿಲ್ಲಾ ವಲಯ, ರಾಜ್ಯವಲಯ ಹಾಗೂ ಇತರ ವಿಶೇಷ ಯೋಜನೆಗಳ ತಾಲೂಕು ಮಟ್ಟದ ಕಛೇರಿಗಳ ಬಿಲ್ಲುಗಳನ್ನು ಪರಿಶೀಲಿಸಿ ಮೇಲು ಸಹಿಗೆ ಮಂಡಿಸುವುದು, ಮಂಜೂರಾತಿ ಕ್ರಮವಹಿಸುವುದು, ಸದರಿ ಯೋಜನೆಗಳ ಅನುದಾನ ಬಿಡುಗಡೆ ಬಗ್ಗೆ ಕ್ರಮವಹಿಸುವುದು ಸರ್ಕಾರಿ ಆದೇಶ/ ಸುತ್ತೋಲೆಗಳ ಕಡತ ನಿರ್ವಹಣೆ, ಕಛೇರಿ ಆದೇಶ ಪುಸ್ತಕ ನಿರ್ವಹಣೆ ಅಧಿಕಾರಿ/ಸಿಬ್ಬಂಧಿಗಳ ರಜೆ, ವೇತನ ಬಡ್ತಿ, ಪಿಂಚಣಿ ಸೌಲಭ್ಯ ಇತ್ಯಾದಿ ಕಡತಗಳ ನಿರ್ವಹಣೆ ಮಾಡುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ತೋಟಗಾರಿಕೆ ಸಹಾಯಕರು** | ರೈತ ಸಂಪರ್ಕ ಕೇಂದ್ರಕ್ಕೆ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಸಿದ್ಧಪಡಿಸುವುದು. ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಮಾಹಿತಿ ಸಂಗ್ರಹಿಸುವುದು. ರೈತರಿಗೆ ತಾಂತ್ರಿಕ ಮಾಹಿತಿ ನೀಡುವುದು. ಇಲಾಖ ಪರಿಕರಗಳನ್ನು ಮತ್ತು ರಾ.ತೋ.ಮಿ.ಗೆ ಸಂಬಂಧಪಟ್ಟಂತೆ ಇತರೆ ಕೆಲಸಗಳನ್ನು ನಿರ್ವಹಿಸುವುದು. ಮೇಲಧಿಕಾರಿಗಳ ಆದೇಶ ಪಾಲಿಸುವುದು. |
| **ತೋಟಗಾರ** | ತೋಟಗಾರಿಕಾ ಕ್ಷೇತ್ರಗಳ ಕೆಲಸ ನಿರ್ವಹಿಸುವುದು ಮತ್ತು ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |

## 4 B (III) ನಿಯಮ ತೆಗೆದುಕೊಳ್ಳುವಂತಹ ಪ್ರಸ್ತಾವನೆಗಳಲ್ಲಿ ಪಾಲಿಸಬೇಕಾದ ಕ್ರಮ, ಮೇಲ್ವಿಚಾರಣೆ, ಚಾನಲ್‌ಗಳ ಮತ್ತು ಅಕೌಂಟೆಬಲಿಟಿ ಸೇರಿದಂತೆ

| | |
|---|---|
| **ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು** | ಪ್ರಸ್ತಾವನೆಗಳ ಕುರಿತು ತೆಗೆದುಕೊಳ್ಳುವ ಕ್ರಮದ ಬಗ್ಗೆ ತೀರ್ಮಾನಿಸುವುದು, ನಮ್ಮ ಹುದ್ದೆಗೆ ನೀಡಿದ ಅಧಿಕಾರ ವ್ಯಾಪ್ತಿಯೊಳಗೆ ಅನುಮೋದಿಸಿ ಮಂಜೂರಾತಿ ನೀಡುವುದು, ಅಗತ್ಯ ಸಂದರ್ಭದಲ್ಲಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು. |
| **ಸಹಾಯಕ ತೋಟಗಾರಿಕೆ ನಿರ್ದೇಶಕರು** | ಕಛೇರಿಯ ಎಲ್ಲಾ ಶಾಖೆಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಸಹಾಯಕರು ಸಲ್ಲಿಸಿರುವ ಕಡತಗಳನ್ನು ಪರಿಶೀಲಿಸಿ ಮಂಡಿಸುವುದು. ಪ್ರಮುಖ/ ತುರ್ತು ವಿಷಯಗಳನ್ನು ಹಿ.ಸ.ತೋ.ನಿ ರವರೊಂದಿಗೆ ಚರ್ಚಿಸಿ ತಮ್ಮ ಅಧೀನ ಸಿಬ್ಬಂಧಿಗಳಿಂದ ಕಡತವನ್ನು ಶೀಘ್ರವಾಗಿ ವಿಲೇವಾರಿಗೆ ಕ್ರಮ ಕೈಗೊಳ್ಳುವುದು ಹಿ.ಸ.ತೋ.ನಿ. ರವರ ಅನುಪಸ್ಥಿತಿಯಲ್ಲಿ ಕಛೇರಿಯ ದೈನಂದಿನ ಕೆಲಸಗಳನ್ನು ನಿರ್ವಹಿಸುವುದು ಹಾಗೂ ಎಲ್ಲಾ ಕಡತಗಳನ್ನು ಇತ್ಯರ್ಥಪಡಿಸಲು ಕ್ರಮ ಜರುಗಿಸುವುದು. |
| **ಸಹಾಯಕ ತೋಟಗಾರಿಕೆ ಅಧಿಕಾರಿಗಳು** | ರಾ.ತೋ.ಮಿ. ಯೋಜನೆಗೆ ಸಂಬಂಧಿಸಿದ ಎಲ್ಲಾ ಶಾಖೆಗಳ ಕೆಲಸಕಾರ್ಯಗಳನ್ನು ಶೀಘ್ರವಾಗಿ ವಿಲೇವಾರಿ ತರುವುದು. ರಾ.ತೋ.ಮಿ. ಯೋಜನೆಯ ಅಧೀನ ಕಛೇರಿಗಳ ವಾರ್ಷಿಕ ತಪಾಸಣೆ ನಡೆಸುವುದು. |
| **ಪ್ರ.ದ.ಸ.** | ತಮ್ಮ ವ್ಯಾಪ್ತಿಗೆ ಸೇರಿದ ಇಲಾಖೆಯ ಎಲ್ಲಾ ಯೋಜನೆಗಳ ಕಡತಾ / ಕೆಲಸ ನಿರ್ವಹಣೆ, ವಿಧಾನಸಭೆ ಹಾಗೂ ಲೋಕಸಭೆ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಅತ್ಯಂತ ತ್ವರಿತವಾಗಿ ಉತ್ತರಿಸುವುದು ಹಾಗೂ ಎಲ್ಲಾ ಕೆಲಸಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಕಡತಗಳನ್ನು ವಿಳಂಬ ಮಾಡದೇ ಮುಂದಿನ ಆದೇಶಕ್ಕಾಗಿ ಹಾಗೂ ಕ್ರಮಕ್ಕಾಗಿ ಮಂಡಿಸುವುದು. |
| **ತೋಟಗಾರಿಕೆ ಸಹಾಯಕರು** | ರೈತ ಸಂಪರ್ಕ ಕೇಂದ್ರಕ್ಕೆ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಸಿದ್ಧಪಡಿಸುವುದು. ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಮಾಹಿತಿ ಸಂಗ್ರಹಿಸುವುದು. ರೈತರಿಗೆ ತಾಂತ್ರಿಕ ಮಾಹಿತಿ ನೀಡುವುದು. ಇಲಾಖ ಪರಿಕರಗಳನ್ನು ಮತ್ತು ರಾ.ತೋ.ಮಿ.ಗೆ ಸಂಬಂಧಪಟ್ಟಂತೆ ಇತರೆ ಕೆಲಸಗಳನ್ನು ನಿರ್ವಹಿಸುವುದು. ಮೇಲಧಿಕಾರಿಗಳ ಆದೇಶ ಪಾಲಿಸುವುದು. |
| **ತೋಟಗಾರ** | ಕ್ಷೇತ್ರದ ಕೆಲಸ ನಿರ್ವಹಣೆ. ಸಸ್ಯಾಭಿವೃದ್ಧಿಪಡಿಸುವುದು. ಮೇಲಧಿಕಾರಿಗಳ ಆದೇಶ ಪಾಲಿಸುವುದು |

## 4 B (IV) ಕೆಲಸ ಕಾರ್ಯಗಳನ್ನು ನಿರ್ವಹಿಸಲು ನಿಗಧಿಪಡಿಸಲಾದ ವಿದಾನಗಳು, ಕಟ್ಟುಪಾಡುಗಳು.

| | |
|---|---|
| ಹಿ.ಸ.ತೋ.ನಿ | ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಿಗೆ ವಹಿಸಿದ ಅಭಿವೃದ್ಧಿ, ವಿಸ್ತರಣೆ ಹಾಗೂ ಆಡಳಿತ ನಿರ್ವಹಣೆ ಅಧೀನ ಅಧಿಕಾರಿ/ ಸಿಬ್ಬಂಧಿಗಳಿಂದ ಯಶಸ್ವಿಯಾಗಿ ಮತ್ತು ಶೀಘ್ರವಾಗಿ ನಿರ್ವಹಿಸಲು ಕ್ರಮವಹಿಸುವುದು. ಇಲಾಖೆಯ ತಾಲ್ಲೂಕು ಉಸ್ತುವಾರಿ ಮಾಡುವುದು |
| **ಸ.ತೋ.ನಿ.** | ಕಛೇರಿ ಎಲ್ಲಾ ಶಾಖೆಗಳಿಂದ ಬರುವ ಕಡತ/ ವಹಿಗಳನ್ನು ಪರಿಶೀಲಿಸಿ ಹಿ.ಸ.ತೋ.ನಿ. ರವರಿಗೆ ಮಂಡಿಸುವುದು, ತುರ್ತು ವಿಷಯಗಳ ಕುರಿತು ಹಿ.ಸ.ತೋ.ನಿ. ರವರೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುವುದು ಹಾಗೂ ಹಿ.ಸ.ತೋ.ನಿ. ರವರ ಅನುಪಸ್ಥಿತಿಯಲ್ಲಿ ಕಛೇರಿಯ ದೈನಂದಿನ ಕೆಲಸ ನಿರ್ವಹಿಸುವುದು. |
| **ಸ.ತೋ.ಅ.** | ರಾ.ತೋ.ಮಿ.ಗೆ ಸಂಬಂಧಿಸಿದ ಎಲ್ಲಾ ತಾಕುಗಳನ್ನು ಪರಿಶೀಲಿಸುವುದು. ರೈತ ಸಂಪರ್ಕ ಕೇಂದ್ರಗಳಲ್ಲಿ ಕೆಲಸ ನಿರ್ವಹಣೆ ಮತ್ತು ಕಡತಗಳನ್ನು ಹಿ.ಸ.ತೋ.ನಿ.ರವರಿಗೆ ಮಂಡಿಸುವುದು. |
| **ಪ್ರ.ದ.ಸ.** | ತಾಂತ್ರಿಕ ಸಹಾಯಕರು/ರೈತ ಸಂಪರ್ಕ ಕೇಂದ್ರ ಹಾಗೂ ವಿಭಾಗಕ್ಕೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಿ ನಿಯಮಾನುಸಾರವಾಗಿ ಮುಂದಿನ ಆದೇಶ ಕೋರಿ ಹಿ.ಸ.ತೋ.ನಿ. ರವರಿಗೆ |

| | |
|---|---|
| | ಮಂಡಿಸುವುದು. |
| **ತೋ.ಸ.** | ಸ.ತೋ.ಅ./ರೈತ ಸಂಪರ್ಕ ಕೇಂದ್ರ ವಿಭಾಗಕ್ಕೆ ಸಂಬಂಧಿಸಿದ ನಿಯಮಾನುಸಾರವಾಗಿ ಕಡತಗಳನ್ನು ಮತ್ತು ವರದಿಗಳನ್ನು ಪರಿಶೀಲಿಸಿ ಮುಂದಿನ ಆದೇಶ ಕೋರಿ ಹಿ.ಸ.ತೋ.ನಿ. ರವರಿಗೆ ಮಂಡಿಸುವುದು. |
| **ತೋಟಗಾರ** | ಮೇಲಧಿಕಾರಿಗಳ ಆದೇಶದಂತೆ ಕೆಲಸ ನಿರ್ವಹಣೆ. |

**4 ಃ (V) ನೌಕರರು ಅವರವರ ಕತ9ವ್ಯಗಳನ್ನು ನಿವ9ಹಿಸಲಾದ/ ಉಪಯೋಗಿಸುವ/ ನಿಯ0ತ್ರಣದಲ್ಲಿಟ್ಟುಕೊ0ಡಿರುವ ನಿಯಮಗಳು/ ಸೂಚನೆಗಳು/ ಕೈಪಿಡಿಗಳು/ ದಾಖಲೆಗಳು ಮತ್ತು ನಿಬ0ದನೆಗಳು.**

1. ಕರ್ನಾಟಕ ನಾಗರೀಕ ಸೇವಾ ನಿಯಮಗಳು
2. ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಸಿ.ಸಿ.ಎ. ನಿಯಮಾವಳಿ)
3. ಕರ್ನಾಟಕ ಆಥಿ9ಕ ಸ0ಹಿತೆ
4. ಕಛೇರಿ ಕೈಪಿಡಿ
5. ವೃ0ದ ಮತ್ತು ನೇಮಕಾತಿ ನಿಯಮಗಳು
6. ಆಯವ್ಯಯ ಕೈಪಿಡಿ
7. ಕರ್ನಾಟಕ ಖಜಾನೆ ಸ0ಹಿತೆ
8. ಸಾದಿಲ್ವಾರು ವೆಚ್ಚದ ಕೈಪಿಡಿ
9. ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮ
10. ಕರ್ನಾಟಕ ಪಾರದರ್ಶಕತೆ ಅಧಿನಿಯಮ–1999
11. ಕರ್ನಾಟಕ ಪಂಚಾಯತರಾಜ್ ಅಧಿನಿಯಮ–1993
12. ಮಾಹಿತಿ ಹಕ್ಕು ಅಧಿನಿಯಮ–2005
13. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮಾರ್ಗಸೂಚಿಗಳು
14. ಸೂಕ್ಷ್ಮ ನೀರಾವರಿ ಯೋಜನೆಯ ಮಾರ್ಗಸೂಚಿಗಳು
15. ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಯೋಜನೆಯ ಮಾರ್ಗಸೂಚಿಗಳು
16. ರಾಜ್ಯ ವಲಯ ಹಾಗೂ ಜಿಲ್ಲಾ ಪಂಚಾಯತ ಯೋಜನೆಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳು
17. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಅಧಿನಿಯಮ
18. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಸಂಬಂಧಿಸಿದ ಮಾರ್ಗಸೂಚಿಗಳು
19. ಇಲಾಖೆ ಮತ್ತು ಆಥಿ9ಕ ಇಲಾಖೆ ಹೊರಡಿಸಿದ ಡೆಲಿಗೇಷನ್ ಆಫ್ ಪಾವರ್ಸ್ ಮತ್ತು ವಿಶೇಷ ಡೆಲಿಗೇಷನ್ ಆಫ್ ಪವರ್ಸ್
20. ಸರಕಾರದ ಅಧಿಸೂಚನೆಗಳು (ಸುತ್ತೋಲೆಗಳು)
21. ಇಲಾಖೆಯಿಂದ ಹೊರಡಿಸಲಾದ ವಿಶೇಷ ಆದೇಶಗಳು ಮತ್ತು ಸುತ್ತೋಲೆಗಳು

- ಸಾಮಾನ್ಯ ಸ್ವೀಕೃತಿ.
- ನಮೂನೆ VIII ರವಾನೆ ರಿಜಿಸ್ಟರ್.
- ನಮೂನೆ–ಎ ಮುದ್ದಾಮ ರಿಜಿಸ್ಟರ್.
- ನಿಯಮ 27 (ನಿಯಮ 63) ಸ್ಟಾಂಪ್ ರಿಜಿಸ್ಟರ್.

- ನಮೂನೆ–6 (ನಿಯಮ 38)ನಗದು ಪುಸ್ತಕ ರಿಜಿಸ್ಟರ್.
- ಕ.ಅ.ಸ.ಪ್ರ ಪತ್ರ 1 (ಅನುಚ್ಛೇದ–6ಹಣ ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಪತ್ರ)
- ಕ.ಖ.ಸಂ 65–ಎ ಬಿಲ್ಲು ಹಾಜರುಪಡಿಸುವ ಚೀಟಿ ರಿಜಿಸ್ಟರ್.
- ಕ.ಆ.ಸಂ ನಮೂನೆ 62–ಎ ಪರಿವರ್ತನೆಯ ಸಲುವಾಗಿ ಬಿಲ್‌ಗಳ ರಿಜಿಸ್ಟರ್.
- ನಮೂನೆ ಸಂಖ್ಯೆ–24ಎ ವೇತನ ಬಟವಾಡೆ ಪುಸ್ತಕ (ನಮೂನೆ ಸಂಖ್ಯೆ 24ಎ)
- ಆಕಸ್ಮಿಕ ರಜಾ ವಹಿ.
- ತೋ.ಉ.ನಿ ಕಛೇರಿ ಅಧಿಕಾರಿ/ ಸಿಬ್ಬಂದಿ ವರ್ಗದವರ ವೇತನ ಬಿಲ್ಲಿನಲ್ಲಿ ಕಡಿತಗೊಳ್ಳುವ ರಿಜಿಸ್ಟರ್ ಹಬ್ಬದ ಮುಂಗಡ
- ಸಾ.ಭ.ನಿ,ಕೆ.ಜಿ.ಐ.ಡಿ, ಎಲ್.ಐ.ಸಿ, ವೃತ್ತಿ ತೆರಿಗೆ, ಜಿ.ಐ.
- ಲೇಖನ ಸಾಮಗ್ರಿ ವಿತರಣಾ ರಿಜಿಸ್ಟರ್.
- ದಿನವಹಿ ದಾಸ್ತಾನು ಪುಸ್ತಕ ರಿಜಿಸ್ಟರ್.
- ತೋ.ಉ.ನಿ (ಜಿಪಂ) ಶಿರಸಿ ಕಛೇರಿಯ ಮಂಜೂರಾತಿ ಆದೇಶ ಪುಸ್ತಕ.
- ಈ ಕಛೇರಿಯ ಸಾಧಿಲ್ವಾರು ಪುಸ್ತಕ.
- ಜಿಲ್ಲಾ ಪಂಚಾಯತ್ ಕಾರವಾರದಿಂದ ಬಂದ ಅನುದಾನವನ್ನು ತಾಲೂಕಾವಾರು ಬಿಡುಗಡೆ ಮಾಡುವ ವಹಿ.
- ನಮೂನೆ 24 ನಿಯಮ–58 ಪ್ರಯಾಣ ಭತ್ಯೆ ರಿಜಿಸ್ಟರ್ (ನಮೂನೆ–24 (ನಿಯಮ–58).
- ಮಾಹೆವಾರು ಖರ್ಚಿನ ತಃಖ್ತೆಯ ರಿಜಿಸ್ಟರ್.
- ಅಧಿಕಾರಿ/ ಸಿಬ್ಬಂದಿಗಳ ಹಾಜರಾತಿ ಪಟ್ಟಿ ರಿಜಿಸ್ಟರ್.
- ಸಾಮಾನ್ಯ ಭವಿಷ್ಯ ನಿಧಿಯ ಮುಂಗಡ ಡ್ರಾ ಮಾಡುವ ರಿಜಿಸ್ಟರ್.
- ವಿದ್ಯುತ್ ಬಳಕೆ ವೆಚ್ಚದ ವಹಿ.
- ವಿಷಯ ವಹಿ ರಿಜಿಸ್ಟರ್.
- ಎನ್.ಡಿ.ಸಿ ಬಿಲ್ಲು ರಿಜಿಸ್ಟರ್.
- ನಮೂನೆ–14 ಅಂತಿಮ ವೇತನ ಪ್ರಮಾಣ ಪತ್ರ.
- ಸಾದಿಲ್ವಾರು ಬಿಲ್ಲುಗಳ ವಿವರ.
- ಕಂಪ್ಯೂಟರ್ ರಿಜಿಸ್ಟರ್.
- ನಮೂನೆ 34–ಎ ಪೀಠೋಪಕರಣ ವಹಿ.
- ಬಿ–7 ನಗದು ರಶೀದಿ.
- ಅಧಿಕಾರಿ/ ಸಿಬ್ಬಂದಿಯರ ಕಾರ್ಯನಿರ್ವಾಹಣ ವರದಿ ಫೈಲ್.
- ಸಿಬ್ಬಂದಿಗಳ ಸೇವಾ ಪುಸ್ತಕ ರಿಜಿಸ್ಟರಗಳು.
- 7–ಎ ದೂರವಾಣಿ ರಿಜಿಸ್ಟರ್.
- ಭಾರತ ಸರ್ಕಾರ ಮಾಹಿತಿ ಹಕ್ಕು ನಿಯಮ–2005.
- ಸರ್ಕಾರ ಸುತ್ತೋಲೆಗಳ ಫೈಲ್.

- ಲೆಕ್ಕ ತಪಾಸಣೆ ಫೈಲ್.
- ರಾಷ್ಟ್ರೀಯ ತೋಟಗಾರಿಕೆ ಮಿಷನ್ ನಗದು ಪುಸ್ತಕ ವಹಿ.
- ರಾಷ್ಟ್ರೀಯ ತೋಟಗಾರಿಕೆ ಮಿಷನ್ ಡಿ.ಸಿ ಬಿಲ್ಲುಗಳ ರಿಜಿಸ್ಟರ್.
- ರಾಷ್ಟ್ರೀಯ ತೋಟಗಾರಿಕೆ ಮಿಷನ್ ಚೆಕ್ ಗಳನ್ನು ವಿತರಿಸುವ ರಿಜಿಸ್ಟರ್.
- ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಡಿ.ಸಿ ಬಿಲ್ಲುಗಳ ರಿಜಿಸ್ಟರ್.
- ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಚೆಕ್ ಗಳನ್ನು ವಿತರಿಸುವ ರಿಜಿಸ್ಟರ್.
- ಸೂಕ್ಷ್ಮ ನೀರಾವರಿ ಯೋಜನೆಯ ನಗದು ಪುಸ್ತಕ ವಹಿ.
- ಸೂಕ್ಷ್ಮ ನೀರಾವರಿ ಯೋಜನೆಯ ಡಿ.ಸಿ ಬಿಲ್ಲುಗಳ ರಿಜಿಸ್ಟರ್.
- ಸೂಕ್ಷ್ಮ ನೀರಾವರಿ ಯೋಜನೆಯ ಚೆಕ್ ಗಳನ್ನು ವಿತರಿಸುವ ರಿಜಿಸ್ಟರ್.

## 4 B (VI) ಕಡತ ಶೀರ್ಷಿಕೆ

| ಕ್ರ.ಸಂ. | ಕಡತದ ಶಾಖೆ | | ದಾಖಲಾತಿಗಳ ನಿರ್ವಹಣೆ | ದಾಖಲಾತಿಗಳ ಉಲ್ಲೇಖ |
|---|---|---|---|---|
| 1. | ಆಡಳಿತ ಶಾಖೆ | ADM | ತೊಟಗಾರಿಕೆ ಇಲಾಖೆಯ ಸಿಬ್ಬಂಧಿ ಮತ್ತು ಅಧಿಕಾರಿಗಳ, ಸೇವಾ ವಿಷಯ ಗಳು, ಶಿಸ್ತು, ನಡತೆ ಹಾಗೂ ಲೆಕ್ಕ ಪತ್ರ ತಪಾಸಣೆ ಹಾಗೂ ಆರ್ಥಿಕ ವಿಚಾರಗಳು | ಹಿಸತೋನಿ/ಜಿಪಂಚಿ/ವಿನಿ/ |
| 2. | ತಾಂತ್ರಿಕ ಶಾಖೆ | TA | ತೋಟಗಾರಿಕೆ ಇಲಾಖೆಯ ತಾಂತ್ರಿಕ ಪತ್ರ ವ್ಯವಹಾರಗಳು, ವರದಿಗಳು ಹಾಗೂ ಇನ್ನಿತರೇ ಪತ್ರ ವ್ಯವಹಾರಗಳು | ಹಿಸತೋನಿ/ಜಿಪಂಚಿ/ತಾಸ/ |

## 4 B (VII) ಪಾಲಸಿಗಳನ್ನು ಮಾಡುವಾಗ ಅಥವಾ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಇರುವ ಏರ್ಪಾಡುಗಳನ್ನು ಸಾರ್ವಜನಿಕ ಸದಸ್ಯರುಗಳ ಸಹಭಾಗಿತ್ವ ಮುಂತಾದ ವಿವರಗಳು.

ಇಲಾಖೆ ಮಾರ್ಗಸೂಚಿ/ಎಂ.ಎಂ.ಆರ್. ಕಾರ್ಯಕ್ರಮಗಳು ಜಿಲ್ಲಾ ಪಂಚಾಯತ್ ಹಾಗೂ ಇಲಾಖಾ ಮೇಲಧಿಕಾರಿಗಳ ಆದೇಶಗಳ ಅಡಿಯಲ್ಲಿ ಯೋಜನೆಗಳ ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳುವುದು. ಸಾರ್ವಜನಿಕ ಕುಂದುಕೊರತೆಗಳನ್ನು ಕಾನೂನಿನ ಚೌಕಟ್ಟಿನೊಳಗೆ ನಿರ್ಧರಿಸಿ ಕ್ರಮ ಕೈಗೊಳ್ಳುವುದು.

## 4 B (VIII) ಈ ಇಲಾಖೆಯಿಂದ ರಚಿಸಲ್ಪಡುವ ಅಥವಾ ಸಲಹೆಗಳನ್ನು ಪಡೆಯುವ ಸಲುವಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚಾಗಿರುವ 'ಸದಸ್ಯರ ಸಮಿತಿ ಅಥವಾ ಇತರ ಪಟ್ಟಿ ಹಾಗೂ ಇಂತಹ ಕಮಿಟಿ ಮತ್ತು ಸಮಿತಿಗಳು ನಡೆಸುವ ಸೇವೆ ಮತ್ತು ನಡವಳಿಗಳನ್ನು ಸಾರ್ವಜನಿಕರು ಆಕ್ಷೇಪಿಸಬಹುದೇ? ಅಥವಾ ಇಂತಹ ಸಭೆಗಳ ನಡವಳಿಗಳನ್ನು ವೀಕ್ಷಿಸಲು ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆಯೇ

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಜಿಲ್ಲಾ ಸಮಿತಿ ಮತ್ತು ಜಿಲ್ಲಾ ತಾಂತ್ರಿಕ ಸಮಿತಿಯು ತೆಗೆದುಕೊಳ್ಳುವ ನಿರ್ಣಯಗಳ ಅನುಷ್ಠಾನಕ್ಕೆ ಕ್ರಮ ವಹಿಸುವುದು.

## 4 B (IX) ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಚಿಕ್ಕಮಗಳೂರು ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರ ದೂರವಾಣಿ ವಿವರಗಳ ಪಟ್ಟಿ.

| ಕ್ರ.ಸಂ | ಹುದ್ದೆ | ಹೆಸರು | ದೂರವಾಣಿ ಸಂಖ್ಯೆ |
|---|---|---|---|
| 1. | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | ಶ್ರೀ ಆರ್.ಸದಾನಂದ (ಪ್ರಭಾರೆ) | 220866 |
| 2. | ಸಹಾಯಕ ತೋಟಗಾರಿಕೆ ನಿರ್ದೇಶಕರು | ಶ್ರೀ ಆರ್.ಸದಾನಂದ | 220866 |
| 3. | ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಶ್ರೀ ಪುನೀತ್.ಕೆ.ಪಿ. | 220866 |
| 4. | ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಶ್ರೀ ಮಧು ಎಲ್.ಪಿ. | 220866 |
| 5. | ಸಹಾಯಕ ತೋಟಗಾರಿಕೆ ಅಧಿಕಾರಿಗಳು-೭ | ಖಾಲಿ ಹುದ್ದೆ | |
| 6. | ಪ್ರಥಮ ದರ್ಜೆ ಸಹಾಯಕರು | ಶ್ರೀಮತಿ ವಿಶಾಲಾಕ್ಷಮ್ಮ | 220866 |
| 7. | ತೋಟಗಾರಿಕೆ ಸಹಾಯಕರು | ಶ್ರೀ ಚನ್ನಬಸಪ್ಪ | 220866 |
| 8. | ತೋಟಗಾರಿಕೆ ಸಹಾಯಕರು | ಶ್ರೀ ಶಿವೇಗೌಡ | 220866 |
| 9. | ತೋಟಗಾರಿಕೆ ಸಹಾಯಕರು | ಖಾಲಿ ಹುದ್ದೆ | |
| 10. | ತೋಟಗಾರ | ಶ್ರೀ ಬೀರೇಗೌಡ | 220866 |

## 4 B (X) ತೋಟಗಾರಿಕೆ ಉಪನಿರ್ದೇಶಕರು (ಜಿಪಂ) ಚಿಕ್ಕಮಗಳೂರು ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರ ಫೆಬ್ರವರಿ –2010 ವೇತನದ ವಿವರ.

| ಕ್ರ. ಸಂ | ಹುದ್ದೆ | ಹೆಸರು | ವೇತನ (ರೂಗಳಲ್ಲಿ) |
|---|---|---|---|
| **1** | ಸಹಾಯಕ ತೋಟಗಾರಿಕೆ ನಿರ್ದೇಶಕರು | ಶ್ರೀ ಆರ್.ಸದಾನಂದ | **29,437-00** |
| **2** | ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಶ್ರೀ ಪುನೀತ್.ಕೆ.ಪಿ. | **16,317-00** |
| **3** | ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಶ್ರೀ ಮಧು ಎಲ್.ಪಿ. | **16,317-00** |
| **4** | ಪ್ರಥಮ ದರ್ಜೆ ಸಹಾಯಕರು | ಶ್ರೀಮತಿ ವಿಶಾಲಾಕ್ಷಮ್ಮ | **15,118-00** |
| **5** | ತೋಟಗಾರಿಕೆ ಸಹಾಯಕರು | ಶ್ರೀ ಚನ್ನಬಸಪ್ಪ | **9,551-00** |
| **6** | ತೋಟಗಾರಿಕೆ ಸಹಾಯಕರು | ಶ್ರೀ ಶಿವೇಗೌಡ | **9,785-00** |
| **7** | ತೋಟಗಾರ | ಶ್ರೀ ಬೀರೇಗೌಡ | **12,104-00** |

## 4 B (XI) ಆಯವ್ಯಯ ವಿತರಣೆ 2009-10.

| ಕ್ರ.ಸಂ. | ಯೋಜನೆ/ ಯೋಜನೇತರ | ಭೌತಿಕ ಗುರಿ | ಆರ್ಥಿಕ ಗುರಿ (ರೂ ಲಕ್ಷಗಳಲ್ಲಿ) |
|---|---|---|---|
| **ಜಿಲ್ಲಾಪಂಚಾಯಿತಿ ಯೋಜನೆಗಳು** | | | |
| 1 | ತೆಂಗು ಬೀಜ ಸಂಗ್ರಹಣೆ ಹಾಗೂ ಸಸ್ಯಾಭಿವೃದ್ಧಿ 2401–00–108–2–71 | 21,600 | 1.63 |
| 2 | ಪ್ರಚಾರ ಮತ್ತು ಸಾಹಿತ್ಯ 2401–00–119–3–74 | 6000<br>1 ಸಂ | 3.00 |

| ಕ್ರ.ಸಂ. | ಯೋಜನೆ/ ಯೋಜನೇತರ | ಭೌತಿಕ ಗುರಿ | ಆರ್ಥಿಕ ಗುರಿ (ರೂ ಲಕ್ಷಗಳಲ್ಲಿ) |
|---|---|---|---|
| 3 | ತೋಟಗಾರಿಕೆ ಕ್ಷೇತ್ರ ನರ್ಸರಿಗಳ ನಿರ್ವಹಣೆ ಮತ್ತು ಮೂಲ ಸೌಕರ್ಯದ ಅಭಿವೃದ್ಧಿ 2401–00–119–4–71 | 1 ಸಂ | 1.20 |
| 4 | ಎಣ್ಣೆ ತಾಳೆ ವ್ಯವಸಾಯ 2401–00–108–2–18 | 1 ಸಂ | 0.20 |
| | **ತಾಲ್ಲೂಕುಪಂಚಾಯಿತಿ ಯೋಜನೆಗಳು** | | |
| 5 | ರೈತರಿಗಾಗಿ ತರಬೇತಿ 2401–00–119–3–75 | 100 ಸಂ | 0.20 |
| 6 | ಸಾಮಾಜಿಕ ತೋಟಗಾರಿಕೆ, ಸಸ್ಯ ಸಂರಕ್ಷಣೆ, ಸರ್ಕಾರಿ ಕಛೇರಿ/ಅತಿಥಿ ಗೃಹಗಳ ಮುಂದಿಡಲು ಅಲಂಕಾರಿಕ ಗಿಡಗಳ ಅಭಿವೃದ್ಧಿ 2401–00–119–3–76 | 500 ಸಂ | 0.25 |
| 7 | ವಿಶೇಷ ಘಟಕ ಯೋಜನೆ 2225–01–800–0–05 | 60 ಸಂ | 0.90 |
| 8 | ಗಿರಿಜನ ಉಪಯೋಜನೆ 2225–02–796–1–08 | 6 ಸಂ | 0.09 |

| | | | |
|---|---|---|---|
| | **ರಾಜ್ಯವಲಯ ಯೋಜನೆಗಳು** | | |
| 9 | ತೋಟಗಾರಿಕೆ ಬೆಳೆಗಳು ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ ಯೋಜನೆ 2401–00–119–5–02 | 100ಹೆ | 1.00 |
| 10 | ಹೊಸ ತರಕಾರಿಗಳನ್ನು ಪರಿಚಯಿಸುವ ಯೋಜನೆ 2401–00–800–2–33 | 1.02 | 2.06 |
| 11 | ತೋಟಗಾರಿಕೆಯಲ್ಲಿ ಯಾಂತ್ರೀಕರಣ 2401–00–800–2–38 | 8 ಸಂ | 2.00 |
| 12 | ವಿಶೇಷ ಘಟಕ ಯೋಜನೆ (ರಾಜ್ಯವಲಯ) 2401–00–800–2–05 | -- | 4.9125 |
| 13 | ಸೂಕ್ಷ್ಮ ನೀರಾವರಿ ಯೋಜನ (ರಾಜ್ಯವಲಯ) | -- | |
| 14 | ರಾಷ್ಟ್ರೀಯ ತೋಟಗಾರಿಕೆ ಮಿಷನ್2401–119–400031 (NHM) | -- | 84.56 |
| 15 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ 2401–00–800–2–43 (RKVY) | -- | 1.50 |
| 16 | ಯೋಜನೇತರ 2401–00–001–2–02 | -- | 14.30 |
| 17 | ಸೂಕ್ಷ್ಮ ನೀರಾವರಿ ಯೋಜನ (ಕೇಂದ್ರವಲಯ) | ನಿರ್ದಿಷ್ಟ ಗುರಿ ನಿಗಧಿಪಡಿಸಿರುವುದಿಲ್ಲ. ಬೇಡಿಕೆಗನುಗುಣವಾಗಿ ಗುರಿ ನಿಗಧಿಪಡಿಸುತ್ತಾರೆ | |

**ತೋಟಗಾರಿಕೆ ಇಲಾಖೆಯಿಂದ ಅನಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ವಿವಿರ**

## ತಾಲ್ಲೂಕಿನಲ್ಲಿ 2009-10 ನೇ ಸಾಲಿಗೆ ಅನುಷ್ಟಾನಗೊಳಿಸಲಾಗುತ್ತಿರುವ ವಿವಿಧ ಜಿಲ್ಲಾ ಪಂಚಾಯಿತಿ ಹಾಗೂ ರಾಜ್ಯ ವಲಯ ಯೋಜನೆಗಳ ಸಂಕ್ಷಿಪ್ತ ನೋಟ

| ಯೋಜನೆಗಳು | ವಿವರ |
|---|---|
| **ತೆಂಗು ಬೀಜ ಸಂಗ್ರಹಣೆ ಹಾಗೂ ಸಸ್ಯಾಭಿವೃದ್ಧಿ** | ಉತ್ತಮ ಜಾತಿಯ ತೆಂಗಿನ ಸಸಿಗಳ ಉತ್ಪಾದನೆ ಹಾಗೂ ಕಡಿಮೆ ದರದಲ್ಲಿ ರೈತರಿಗೆ ವಿತರಣೆ ಅಲ್ಲದೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಲ್ಲಿ ರೈತರಿಗೆ ವಿತರಿಸುವುದು ಹಾಗೂ ಮಾವು. ಸಪೋಟ ಕಸಿ:ಸಸಿ ಗಿಡಗಳನ್ನು ವೃದ್ದಿಪಡಿಸಿ ರೈತರಿಗೆ ವಿತರಿಸುವುದು ಹಾಗೂ ಇಲಾಖಾ ಯೋಜನೆಗಳಿಗೆ ಉಪಯೋಗಿಸುವುದು., |

| | |
|---|---|
| **ಪ್ರಚಾರ ಮತ್ತು ಸಾಹಿತ್ಯ** | ಫಲಪುಷ್ಪ ಪ್ರದರ್ಶನ/ ವಿಚಾರ ಸಂಕೀರ್ಣ ಏರ್ಪಡಿಸುವುದು ಮತ್ತು ತೋಟಗಾರಿಕೆ ಬೆಳೆಗಳಿಗೆ ಸಂಬಂದಿಸಿದಂತೆ ಪ್ರಚಾರ ಸಾಹಿತ್ಯವನ್ನು ಕರಪತ್ರಗಳಲ್ಲಿ ಮುದ್ರಿಸಿ ರೈತರುಗಳಿಗೆ ವಿತರಿಸುವುದು. |
| **ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆತಾಳೆಯ ವ್ಯವಸಾಯ** | 1 ಹೆಕ್ಟೇರ್ ಪ್ರದೇಶದಲ್ಲಿ ತಾಳೆ ಬೆಳೆ ಬೆಳೆದಿರುವ ರೈತರಿಗೆ ತಾಳೆಗಿಡ ಬೇಸಾಯಕ್ಕೆ ಅನುಕೂಲವಾಗುವಂತೆ ನೀರಾವರಿ ಸೌಲಭ್ಯಕ್ಕಾಗಿ ಡೀಸೆಲ್ ಪಂಪ್‌ಸೆಟ್ ಖರೀದಿಸುವ ರೈತರಿಗೆ ಶೇ 50 ರ ಸಹಾಯ ಧನ ವಿತರಿಸುವುದು ಗರಿಷ್ಠ 1 ಡೀಸೆಲ್ ಪಂಪ್‌ಸೆಟ್‌ಗೆ ರೂ 10000.00 ಸಹಾಯಧನ ನೀಡಲಾಗುವುದು. ಹನಿ ನೀರಾವರಿ ಪದ್ಧತಿ ಅಳವಡಿಸಲು 1 ಹೆಕ್ಟೇರ್‌ಗೆ ರೂ.13950.00 ನಂತೆ ಸಹಾಯಧನ ನೀಡಲಾಗುವುದು. ಅಲ್ಲದೆ ತಾಳೆ ಬೆಳೆಯನ್ನು ತಾಲ್ಲೂಕಿನಲ್ಲಿ ಇನ್ನೂ ಹೆಚ್ಚಿಗೆ ಪ್ರದೇಶದಲ್ಲಿ ಬೆಳೆಯುವುದಕ್ಕೆ ರೈತರನ್ನು ಪ್ರೋತ್ಸಾಹಿಸಲು ಪ್ರಚಾರ ಕಾರ್ಯಕ್ರಮವನ್ನು ಕೈಗೊಳ್ಳುವುದು ಹಾಗೂ ತಾಳೆ ತಾಕಿನಲ್ಲಿ ಕೊರೆಸಿದ ಹೊಸ ಬೋರ್‌ವೆಲ್ ಗಳಿಗೆ ಕೇಸಿಂಗ್ ಪೈಪ್, ಸಬ್ ಮರ್ಸಿಬಲ್ ಪಂಪ್ ಸೆಟ್ ಜಿ.ಐ ಪೈಪ್ ಹಾಗೂ ಪ್ಯಾನಲ್ ಬೋರ್ಡ್ ಅಳವಡಿಕೆಗೆ ಶೇ 50 ರ ಸಹಾಯಧನ ಗರಿಷ್ಠ ರೂ. 25000-00 ಸಹಾಯಧನ ನೀಡಲಾಗುವುದು. ಹಾಗೂ ತಾಳೆ ಹಣ್ಣು ಕೀಳುವ ಉಪಕರಣ, ಎಲೆ ಕತ್ತರಿಸುವ ಉಪಕರಣ, ಹುಲ್ಲು/ಕಳೆ ತೆಗೆಯುವ ಉಪಕರಣ ಇತ್ಯಾದಿಗಳಿಗೆ ಶೇ 50 ರ ಸಹಾಯಧನ ನೀಡಲಾಗುವುದು. |
| **ರೈತರಿಗೆ ತರಬೇತಿ** | ಈ ಯೋಜನೆಯಲ್ಲಿ ಎರಡು ದಿನಗಳ ತರಬೇತಿಯಿದ್ದು, ತರಬೇತಿ ಅವಧಿಯಲ್ಲಿ ಪ್ರತಿಯೊಬ್ಬ ರೈತರಿಗೆ ರೂ. 125.00 ದಿನಭತ್ಯೆಯಾಗಿ ಹಾಗೂ ರೂ, 15.00 ಪ್ರವಾಸ ಭತ್ಯೆ ಹಾಗೂ ಲಘು ಉಪಹಾರಕ್ಕಾಗಿ ಹಾಗೂ ಮಿನಿ ಕಿಟ್ ವಿತರಣೆ ಮತ್ತು ತರಬೇತಿ ಸಾಮಾಗ್ರಿಗಾಗಿ ರೂ. 60.00 ವಿನಿಯೋಗಿಸಲಾಗುವುದು. |
| **ತೋಟಗಾರಿಕೆ ಪ್ರದೇಶ ವಿಸ್ತರಣೆ, ಅಲಂಕಾರಿಕೆ ಗಿಡಗಳ ಅಭಿವೃದ್ಧಿ, ಸಸ್ಯ ಸಂರಕ್ಷಣಾ ಔಷಧಿಗಳ ವಿತರಣೆ** | ಈ ಯೋಜನೆಯಲ್ಲಿ ಕುಂಡಗಳಲ್ಲಿ ಅಲಂಕಾರಿಕ ಗಿಡಗಳನ್ನು ಅಭಿವೃದ್ದಿ ಪಡಿಸಿ ಸರ್ಕಾರಿ ಕಛೇರಿಗಳಿಗೆ ಹಾಗೂ ಅಥಿತಿ ಗೃಹಗಳಿಗೆ ನೀಡಲಾಗುವುದು. ಯೋಜನೆಯಡಿಯಲ್ಲಿ ಅರ್ಧ ಅಥವಾ 1 ಎಕರೆ ವಿಸ್ತೀರ್ಣದಲ್ಲಿ ತೆಂಗು/ಹಣ್ಣಿನ ಗಿಡಗಳನ್ನು ಅಭಿವೃದ್ದಿ ಪಡಿಸುವ ಆಸಕ್ತ ರೈತರಿಗೆ ಉಚಿತವಾಗಿ ಗಿಡಗಳನ್ನು ವಿತರಿಸಲಾಗುವುದು. ಈ ಯೊಜನೆಯಡಿಯಲ್ಲಿ ಶೇ50 ರ ಸಹಾಯಧನದಲ್ಲಿ ತೋಟಗಾರಿಕೆ ಬೆಳೆಗಳಿಗೆ ತಗಲುವ ರೋಗ ಮತ್ತು ಕೀಟ ಹತೋಟಿಗೆ ಸಸ್ಯ ಸಂರಕ್ಷಣ ಔಷದಿಗಳನ್ನು ವಿತರಿಸಲಾಗುವುದು |
| **ವಿಶೇಷ ಘಟಕ ಯೋಜನೆ** | ಫಲಾನುಭವಿಗಳಿಗೆ ರೂ 1500-00 ಗಳ ಮೊತ್ತಕ್ಕೆ ಹಣ್ಣಿನ ಗಿಡಗಳು, ಸಸ್ಯ ಸಂರಕ್ಷಣಾ ಔಷಧಿ, ಸಾವಯುವ ಗೊಬ್ಬರ, ನಿರ್ವಹಣಾ ವೆಚ್ಚವನ್ನು ಭರಿಸುವುದು. |
| **ಗಿರಿಜನ ಉಪಯೋಜನೆ** | ಫಲಾನುಭವಿಗಳಿಗೆ ರೂ 1500-00 ಗಳ ಮೊತ್ತಕ್ಕೆ ಹಣ್ಣಿನ ಗಿಡಗಳು, ಸಸ್ಯ ಸಂರಕ್ಷಣಾ |

| | |
|---|---|
| | ಔಷಧಿ, ಸಾವಯುವ ಗೊಬ್ಬರ, ನಿರ್ವಹಣಾ ವೆಚ್ಚವನ್ನು ಭರಿಸುವುದು. |
| **ತೋಟಗಾರಿಕೆ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ** | ಕೀಟ ಮತ್ತು ರೋಗಗಳ ನಿಯಂತ್ರಣಕ್ಕಾಗಿ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ವಿತರಿಸುವುದು. |
| **ಹೊಸ ತರಕಾರಿ ತಳಿಗಳನ್ನು ಪರಿಚಯಿಸುವ ಯೋಜನೆ** | ಹೈಬ್ರಿಡ್ / ಸುಧಾರಿತ ತರಕಾರಿ ಬೀಜಗಳನ್ನು ಖರೀದಿಸಿ ರೈತರಿಗೆ ರಿಯಾಯಿತಿ ದರದಲ್ಲಿ ವಿತರಿಸಲಾಗುವುದು |
| **ತೋಟಗಾರಿಕೆಯಲ್ಲಿ ಯಾಂತ್ರೀಕರಣ** | ತೋಟಗಾರಿಕೆಗೆ ಸಂಬಂಧಿಸಿದ ಯಂತ್ರ / ಉಪಕರಣಗಳನ್ನು ಖರೀದಿಸಿದ ಫಲಾನುಭವಿಗೆ ಶೇ 50 ರ ಸಹಾಯಧನ ನೀಡಲಾಗುವುದು. ಗರಿಷ್ಟ ರೂ 50000 ರವರೆಗೆ ಸಹಾಯಧನ ಪಡೆಯಬಹುದಾಗಿರುತ್ತದೆ |
| **ವಿಶೇಷ ಘಟಕ ಯೋಜನೆ (ರಾ.ವ.)** | ತಾಲ್ಲೂಕಿನ ಪರಿಶಿಷ್ಟ ಜಾತಿ ರೈತರಿಗೆ ಪ್ರದೇಶ ವಿಸ್ತರಣೆ, ಹನಿ ನೀರಾವರಿ, ಯಾಂತ್ರೀಕರಣ, ಸಾವಯುವ ಕೃಷಿಗೆ ಸಹಾಯಧನ ನೀಡಲಾಗುವುದು ಹಾಗೂ ತರಕಾರಿ ಬೀಜ ಹಾಗೂ ಸಸ್ಯ ಸಂರಕ್ಷಣಾ ಔಷಧಿಗಳನ್ನು ರಿಯಾಯಿತಿ ದರದಲ್ಲಿ ರೈತ ಫಲಾನುಭವಿಗಳಿಗೆ ವಿತರಿಸುವುದು. |
| **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ** | ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಈ ಯೋಜನೆಯಡಿ ಯಾಂತ್ರೀಕರಣದ ಫಲಾನುಭಿಗಳಿಗೆ ಶೇ.50ರ ಸಹಾಯಧನ ನೀಡಲಾಗುವುದು |

**ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ**

| | |
|---|---|
| **ಸಸ್ಯಾಭಿವೃದ್ಧಿಗಾಗಿ ಮೂಲಭೂತ ಸೌಕರ್ಯ** | |
| **ಖಾಸಗಿ ಕ್ಷೇತ್ರ** | |
| 1.ಸಣ್ಣ ಸಸ್ಯಗಾರ (1 ಹೆ) | ಯೋಜನಾ ವೆಚ್ಚದ ಶೇ 50. ರಂತೆ ರೂ 1.50 ಲಕ್ಷ ಸಹಾಯಧನವನ್ನು ಕ್ರೆಡಿಟ್ ಲಿಂಕ್ ಬ್ಯಾಕ್ ಎಂಡೆಡ್ ಮೂಲಕ ಸಹಾಯಧನ ನೀಡಲಾಗುವುದು. |
| **ಹೊಸ ತೋಟಗಳ ಸ್ಥಾಪನೆ** | |
| ಹಣ್ಣುಗಳು (ಬಹುವಾರ್ಷಿಕ) (ಮಾವು, ಸಪೋಟ) | ವೆಚ್ಚದ ಶೇ 75 ರಂತೆ ಗರಿಷ್ಟ ರೂ 22500/- ಪ್ರತಿ ಹೆ ಗೆ ಮಿತಿಗೊಳಿಸಿ ಪ್ರತಿಫಲಾನುಭವಿ ಗರಿಷ್ಟ 4 ಹೆ ಪ್ರದೇಶಕ್ಕೆ ಮೊದಲನೇ ವರ್ಷ ರೂ 11250/- ಎರಡನೇ ವರ್ಷ ರೂ 4500/- ಹಾಗೂ ಮೂರನೇ ವರ್ಷ 6750/- (50:250:30ರ ಸಮಪಾತದಲ್ಲಿ). ಮೂರು ವರ್ಷಗಳ ಸಹಾಯಧನ ನೀಡಲಾಗುವುದು. ಎರಡನೇ ವರ್ಷದಲ್ಲಿ ನೆಟ್ಟಿರುವ ಗಿಡಗಳಲ್ಲಿ ಶೇ 75 ರಷ್ಟು, ಮೂರನೇ ವರ್ಷದಲ್ಲಿ ಶೇ 90 ರಷ್ಟು ಬದುಕಿದ್ದಲ್ಲಿ ಮಾತ್ರ ಎರಡನೇ ಹಾಗೂ ಮೂರನೇ ವರ್ಷದ ಸಹಾಯಧನವನ್ನು ಪಡೆಯಲು ಅರ್ಹರಾಗಿರುತ್ತಾರೆ. |
| ಹಣ್ಣುಗಳು(ವಾರ್ಷಿಕ ಬೆಳೆ) (ಬಾಳೆ) | ಪ್ರತಿ ಹೆ ಗೆ ಶೇ 50 ರಂತೆ 15000/- ಮೂರು ವರ್ಷಗಳಲ್ಲಿ ನೀಡಲಾಗುವುದು. ಮೊದಲನೇ ವರ್ಷ ರೂ 7500/-, ಎರಡನೇ ವರ್ಷ 4500/- ಸಹಾಯಧನ ನೀಡಲಾಗುವುದು. ಒಬ್ಬ ಫಲಾನುಭವಿ ಗರಿಷ್ಟ 4 ಹೆ ವರೆಗೂ ಸಹಾಯಧನಕ್ಕೆ ಅರ್ಹರಾಗಿರುತ್ತಾರೆ. |
| **ಪುಷ್ಪಾಭಿವೃದ್ಧಿ** | |
| **ಬಿಡಿಹೂಗಳು** (ಸೇವಂತಿಗೆ, ಚೆಂಡು ಹೂ, ಆಸ್ಟರ್, ಮಲ್ಲಿಗೆ, ಕನಕಾಂಬರ) | ಸಣ್ಣ ಮತ್ತು ಅತಿಸಣ್ಣ ರೈತರಿಗೆ ಗರಿಷ್ಟ ರೂ 12000/- ಪ್ರತಿ ಹೆ.ಗೆ ಮಿತಿಗೊಳಿಸಿ ಪ್ರತಿ ಫಲಾನುಭವಿಗೆ ಗರಿಷ್ಟ 2 ಹೆ. ವಿಸ್ತೀರ್ಣದ ವರೆಗೆ ರೂ 24000/- ಸಹಾಯಧನ ನೀಡಲಾಗುವುದು.<br>ಇತರೆ ರೈತರಿಗೆ ಶೇ.33 ರಂತೆ ಗರಿಷ್ಟ ರೂ 7920/- ಗಳಿಗೆ ಮಿತಿಗೊಳಿಸಿ ಪ್ರತಿ ಫಲಾನುಭವಿಗೆ ಗರಿಷ್ಟ 4 ಹೆ. ವಿಸ್ತೀರ್ಣಕ್ಕೆ ಗರಿಷ್ಟ ರೂ 31680/- ಸಹಾಯಧನ |

| | |
|---|---|
| | ನೀಡಲಾಗುವುದು. |
| **ಸಾಂಬಾರು ಮತ್ತು ಸುಗಂಧ ದ್ರವ್ಯಬೆಳೆಗಳು** (ಕಾಳುಮೆಣಸು,ಮರ ಜಾತಿಯಸಾಂಬಾರು ಬೆಳೆಗಳು) | ಪ್ರತಿ ಫಲಾನುಭವಿಗೆ ಶೇ 75 ರಂತೆ ರೂ 11250/- ಗರಿಷ್ಟ 4 ಹೆ. ವಿಸ್ತೀರ್ಣದ ವರೆಗೆ ರೂ 45000/- ಸಹಾಯಧನ ನೀಡಲಾಗುವುದು. |
| **ಹಳೆಯ ತೋಟಗಳ ಪುನಶ್ಚೇತನ ಅಥವಾ ಬದಲಾವಣೆ** | |
| ಕಿತ್ತಳೆ ಪುನಶ್ಚೇತನ | ಪ್ರತಿ ಫಲಾನುಭವಿಗೆ ಒಂದು ಹೆಕ್ಟೇರ್‌ಗೆ 216ರಂತೆ ಕಿತ್ತಳೆ ಸಿಸಗಳನ್ನು ವಿತರಿಸುವುದು |

| | |
|---|---|
| **ಸಂರಕ್ಷಿತ ಬೇಸಾಯ** | |
| **ಸಾಧಾರಣ ಹಸಿರು ಮನೆ** | |
| ಸಣ್ಣ ಮತ್ತು ಅತಿ ಸಣ್ಣ ರೈತರು. | ಪ್ರತಿ ಫಲಾನುಭವಿಗೆ ಶೇ 50 ರಂತೆ ರೂ 125/- ಚ.ಮೀ/ ಗರಿಷ್ಟ 1000 ಚ.ಮೀ ವರೆಗೆ ರೂ 1.25 ಲಕ್ಷ ಸಹಾಯಧನ ನೀಡಲಾಗುವುದು. |
| ಇತರೆ ರೈತರು | ಪ್ರತಿ ಫಲಾನುಭವಿಗೆ ಶೇ 33 ರಂತೆ ರೂ 83/- ಚ.ಮೀ/ ಗರಿಷ್ಟ 1000 ಚ.ಮೀ ವರೆಗೆ ರೂ 0.83 ಲಕ್ಷ ಸಹಾಯಧನ ನೀಡಲಾಗುವುದು. |
| **ನೆರಳು ಪರದೆ** | ಪ್ರತಿ ಫಲಾನುಭವಿಗೆ ಶೇ 50 ರಂತೆ ರೂ 3500/- 500 ಚ.ಮೀ ಗರಿಷ್ಟ 2 ಹೆ ವರೆಗೆ ರೂ 1.40 ಲಕ್ಷ ಸಹಾಯಧನ ನೀಡಲಾಗುವುದು. |
| **ಸಮಗ್ರಪೋಷಕಾಂಶ ನಿರ್ವಹಣೆ / ಸಮಗ್ರ ಕೀಟ ನಿರ್ವಹಣೆಗೆ ಪ್ರೋತ್ಸಾಹ (ಮಾವು, ಬಾಳೆ, ಕಾಳುಮೆಣಸು, ಕಿತ್ತಳೆ, ತರಕಾರಿ ಮತ್ತು ಇತರೆ ತೋಟಗಾರಿಕೆ ಬೆಳೆಗಳು)** | ಪ್ರತಿ ಫಲಾನುಭವಿಗೆ ಶೇ 50 ರಂತೆ ರೂ 1000/- ಹೆ.ಗೆ ಮಿತಿಗೊಳಿಸಿ ಸಹಾಯಧನ ನೀಡಲಾಗುವುದು |
| **ಸಮಗ್ರ ಕೀಟ ನಿರ್ವಹಣೆಗೆ ಪ್ರೋತ್ಸಾಹ** (ಪಪಾಯ, ಕಾಳುಮೆಣಸು, ಮಾವು, ಕಿತ್ತಳೆ, ತರಕಾರಿ ಮತ್ತು ಇತರೆ ತೋಟಗಾರಿಕೆ ಬೆಳೆಗಳು) | ಪ್ರತಿ ಫಲಾನುಭವಿಗೆ ಶೇ 50 ರಂತೆ ರೂ 1000/-ಪ್ರತಿ ಹೆ ಗೆ ಮಿತಿಗೊಳಿಸಿ ಸಹಾಯಧನ ನೀಡಲಾಗುವುದು |
| **ಸಾವಯವ ಕೃಷಿ** | |
| ಸಾವಯವ ಕೃಷಿ ಅಳವಡಿಕೆ | ವೆಚ್ಚದ ಶೇ.50 ರಷ್ಟು ಗರಿಷ್ಟ ರೂ 10000/- ಪ್ರತಿ ಹೆ.ಗೆ ಮಿತಿಗೊಳಿಸಲಾಗಿದೆ. ಪ್ರತಿ ಫಲಾನುಭವಿಗೆ 4 ಹೆ ಗೆ ರೂ 40000/- ಸಹಾಯಧನವನ್ನು ನೀಡಲಾಗುವುದು. |
| ಎರೆಹುಳು ಗೊಬ್ಬರ / ಬಯೋಡೈಜೆಸ್ಟರ್ ಘಟಕ ಸ್ಥಾಪನೆ | ವೆಚ್ಚದ ಶೇ.50 ರಷ್ಟ ಗರಿಷ್ಟ ರೂ 30000/- ಪ್ರತಿ ಘಟಕಕ್ಕೆ ಮಿತಿಗೊಳಿಸಲಾಗಿದೆ. |
| **ಮಾನವ ಸಂಪನ್ಮೂಲ ಅಭಿವೃದ್ಧಿ** ರಾಜ್ಯದೊಳಗೆ ರೈತರಪ್ರವಾಸ. (5ದಿನಗಳು) | ಪ್ರತಿ ಫಲಾನುಭವಿಗೆ ರೂ 1500/- ರಂತೆ 5 ದಿನಗಳ ರಾಜ್ಯದೊಳಗಿನ ವಿವಿಧ ತೋಟಗಾರಿಕೆ ಸಂಬಂಧಿಸಿದ ರೈತರ ತಾಕುಗಳು ಹಾಗೂ ಇನ್ಸಿಟ್ಯೂಟ್‌ಗಳಿಗೆ ಪ್ರವಾಸ ಕರೆದುಕೊಂಡು ಹೋಗುವುದು |

| | |
|---|---|
| ರೈತರಿಗೆ ತರಬೇತಿ / ಜಾಗೃತಿ ಶಿಬಿರ, ರಾತ್ರಿ ಸಭೆಗಳು, | ಪ್ರತಿ ಫಲಾನುಭವಿಗೆ ರೂ 200/-. |
| ಹೊರ ರಾಜ್ಯದಲ್ಲಿ ರೈತರ ಪ್ರವಾಸ (7 ದಿನಗಳು) | ಪ್ರತಿ ಫಲಾನುಭವಿಗೆ ರೂ 2500/- ರಂತೆ 7 ದಿನಗಳ ಹೊರರಾಜ್ಯದೊಳಗಿನ ವಿವಿಧ ತೋಟಗಾರಿಕೆ ಸಂಬಂಧಿಸಿದ ರೈತರ ತಾಕುಗಳು ಹಾಗೂ ಇನ್ಸ್ಟಿಟ್ಯೂಟ್‌ಗಳಿಗೆ ಪ್ರವಾಸ ಕರೆದುಕೊಂಡು ಹೋಗುವುದು. |
| ಜೇನು ಸಾಕಾಣಿಕೆ ಮೂಲಕ ಪರಾಗಸ್ಪರ್ಶಕ್ಕಾಗಿ ಬೆಂಬಲ | ವೆಚ್ಚದ ಶೇ.50 ರಷ್ಟು ಗರಿಷ್ಟ ರೂ 800/- ಪ್ರತಿ ಜೇನುಗೂಡು ಪೆಟ್ಟಿಗೆ ಸಹಿತ. |
| **ವಿಶೇಷ ಹನಿ ನೀರಾವರಿ ಸಹಾಯಧನ** | ಹನಿ ನೀರಾವರಿ ಅಳವಡಿಸಿಕೊಂಡ ಫಲಾನುಭವಿಗಳಿಗೆ ಶೇ.75ರಷ್ಟು ಸಹಾಯಧನ ವಿತರಿಸುವುದು. |

## 4 B (XII) ಸಹಾಯಧನದೊಂದಿಗೆ ನಡೆಸುವ ಯೋಜನೆಗಳು ಅಂತಹ ಯೋಜನೆಗಳ ಫಲಾನುಭವಿಗಳ ವಿವರ ಮತ್ತು ಮಂಜೂರಾದ ಹಣ.

**ತಾಲ್ಲೂಕಿನ ಆಯಾ ಯೋಜನೆಗಳ ವಹಿಗಳಲ್ಲಿ ನಮೂದಿಸಲಾಗಿದೆ.**

**ಮುಂದುವರೆದು 2009-10 ನೇ ಸಾಲಿಗೆ ಸಹಾಯಧನದೊಂದಿಗೆ ನಡೆಸುವ /ಫಲಾನುಭವಿ ಆಧಾರಿತ ಯೋಜನೆಗಳು ಮತು ಮಂಜೂರಾದ ಹಣದ ವಿವರ ಕೆಳಗಿನಂತಿರುತ್ತದೆ**

| ಕ್ರ.ಸಂ | ಸಹಾಯಧನದೊಂದಿಗೆ ನಡೆಸುವ ಯೋಜನೆಗಳು | ಒಟ್ಟು ವಾರ್ಷಿಕ ಆರ್ಥಿಕ ಗುರಿ (ಲಕ್ಷ) | ಈವರೆಗೆ ಬಿಡುಗಡೆಯಾಗಿರುವ ಅನುದಾನ (ರೂ ಲಕ್ಷಗಳಲ್ಲಿ) |
|---|---|---|---|
| **1** | ಹನಿ ನೀರಾವರಿ ಯೋಜನೆ 2401-00-108-2-30 | **60.00** | |
| 2 | ಎಣ್ಣೆ ತಾಳೆ ವ್ಯವಸಾಯ 2401-00-108-2-18 | 0.20 | 0.20 |
| 3 | ವಿಶೇಷ ಘಟಕ ಯೋಜನೆ 2225-01-800-0-05 | 0.90 | 0.90 |
| 4 | ಗಿರಿಜನ ಉಪಯೋಜನೆ 2225-02-796-1-08 | 0.09 | 0.09 |
| 5 | ರೈತರಿಗಾಗಿ ತರಬೇತಿ 2401-00-119-3-75 | 0.20 | |
| 6 | ಸಾಮಾಜಿಕ ತೋಟಗಾರಿಕೆ, ಸಸ್ಯ ಸಂರಕ್ಷಣೆ, ಸರ್ಕಾರಿ ಕಛೇರಿ/ಅತಿಥಿ ಗೃಹಗಳ ಮುಂದಿಡಲು ಅಲಂಕಾರಿಕ ಗಿಡಗಳ ಅಭಿವೃದ್ಧಿ 2401-00-119-3-76 | 0.25 | |
| 7 | ತೋಟಗಾರಿಕೆ ಬೆಳೆಗಳು ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ ಯೋಜನೆ 2401-00-119-5-02 | 1.00 | 1.00 |
| 8 | ಹೊಸ ತರಕಾರಿಗಳನ್ನು ಪರಿಚಯಿಸುವ ಯೋಜನೆ 2401-00-800-2-33 | 2.00 | 2.06 |
| 9 | ತೋಟಗಾರಿಕೆಯಲ್ಲಿ ಯಾಂತ್ರೀಕರಣ 2401-00-800-2-38 | 2.00 | 2.00 |
| 10 | ವಿಶೇಷ ಘಟಕ ಯೋಜನೆ (ರಾಜ್ಯವಲಯ) 2401-00-800-2-05 | 4.9125 | 4.9125 |

| | | | |
|---|---|---|---|
| 11 | ಸೂಕ್ಷ್ಮ ನೀರಾವರಿ ಯೋಜನೆ 2401-119-400031 (ಕೇಂದ್ರವಲಯ) | ನಿರ್ಧಿಷ್ಟ ಗುರಿ ನಿಗಧಿಪಡಿಸಿರುವುದಿಲ್ಲ. ಬೇಡಿಕೆಗನುಗುಣವಾಗಿ ಗುರಿ ನಿಗಧಿಪಡಿಸುತ್ತಾರೆ | |
| 12 | ಸೂಕ್ಷ್ಮ ನೀರಾವರಿ ಯೋಜನೆ(ರಾಜ್ಯವಲಯ) | | |
| 13 | ರಾಷ್ಟ್ರೀಯ ತೋಟಗಾರಿಕೆ ಮಿಷನ್2401-119-400031 (NHM) | 84.56 | 80.93 |
| 14 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಯಾಂತ್ರೀಕರಣ | 1.50 | 1.50 |

## 4 B (XIII) ಇಲಾಖೆಯಿಂದ ಅಥರೈಜೇಷನ್ ಮಂಜೂರಾದ ಅಥವಾ ಪರವಾನಿಗೆ ನೀಡಲಾದ ಮತ್ತು ಕಡಿಮೆ ದರದಲ್ಲಿ ಸವಲತ್ತುಗಳನ್ನು ಪಡೆಯಲಾದ ರೆಸಿಪಿಯೆಂಟ್ಸ್‌ಗಳ ವಿವರಗಳು.

ಯಾವುದೂ ಇರುವುದಿಲ್ಲ.

## 4 B (XIV) ಕುಗ್ಗಿಸಲಾದ ಎಲೆಕ್ಟ್ರಾನಿಕ್ ಮಾದರಿಯಲ್ಲಿ ಲಭ್ಯವಿರುವ ಮಾಹಿತಿ ವಿವರ ದೊರಕುವಂತೆ ಅಥವಾ ಮಾಹಿತಿ ಇಟ್ಟುಕೊಂಡಿರುವಿಕೆ.

**ಆರ್ಥಿಕ ವರ್ಷಾಂತ್ಯದಲ್ಲಿ ಎಲೆಕ್ಟ್ರಾನಿಕ್ ಉಪಕರಣ ಸರಬರಾಜಾದುದರಿಂದ ಮಾಹಿತಿಗಳನ್ನು ಇನ್ನೂ ಗಣಕೀಕರಿಸಿರುವುದಿಲ್ಲ.**

## 4 B (XV) ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಅವಕಾಶ ವಿಚಾರಗಳು ಗ್ರಂಥಾಲಯ ಅಥವಾ ಓದುವ ಕೊಠಡಿಗಳನ್ನು ಒಳಗೊಂಡು ಸಾರ್ವಜನಿಕ ಉಪಯೋಗಕ್ಕಾಗಿ ತೆರೆದಿದ್ದಾರೆ?

ಕಛೇರಿಯಲ್ಲಿ ಗ್ರಂಥಾಲಯ ಮತ್ತು ಓದುವ ಕೊಠಡಿಗಳ ಸೌಲಭ್ಯವಿರುವುದಿಲ್ಲ

## 4 B (XVI) ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು, ಪದನಾಮ ಮತ್ತು ಇತರೇ ವಿವರಗಳು

## 4 B (XVII) ನಿಗಧಿಪಡಿಸಿದ ಇತರೇ ವಿಷಯಗಳು

**ಯಾವುದು ಇಲ್ಲ**

ಈ ಎಲ್ಲಾ ಮಾಹಿತಿಗಳು ಜಿಲ್ಲೆಯ ಅಧಿಕೃತ ವೆಬ್‌ಸೈಟ್ http://www.chickmagalur.nic.in ನಲ್ಲಿ ಲಭ್ಯವಿರುತ್ತದೆ.

**<u>ಉಪ ಸಾರ್ವಜನಿಕ ಮಾಹಿತಿ ಅಧಿಕಾರಿ</u>**
**ಶ್ರೀ ಪುನೀತ್.ಕೆ.ಪಿ.,**
**ಸಹಾಯಕ ತೋಟಗಾರಿಕೆ ಅಧಿಕಾರಿ**
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಕಛೇರಿ
ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು

**<u>ಸಾರ್ವಜನಿಕ ಮಾಹಿತಿ ಅಧಿಕಾರಿ</u>**
**ಶ್ರೀ ಆರ್.ಸದಾನಂದ**
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು
ದೂರವಾಣಿ ಸಂಖ್ಯೆ: 220866

**<u>ಮೇಲ್ಮನವಿ ಪ್ರಾಧಿಕಾರ</u>**
**ಶ್ರೀ ಶಕೀಲ್ ಅಹಮದ್**
ತೋಟಗಾರಿಕೆ ಉಪನಿರ್ದೇಶಕರು
ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು
ದೂರವಾಣಿ ಸಂಖ್ಯೆ: 235334

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು**
**(ಜಿಲ್ಲಾಪಂಚಾಯಿತಿ) ಚಿಕ್ಕಮಗಳೂರು**